# ಬೆಳಗಾವಿ ವರದಿ

ಕನ್ನಡ ದಿನಪತ್ರಿಕೆ

15 ಫೆಬ್ರುವರಿ । ಗುರುವಾರ
15 February 2024


ಪ್ರಧಾನ ಸಂಪಾದಕ : ಸತೀಶ ಬ ಗುಡಗೆನಟ್ಟಿ

BELAGAVI VARADI KANNADA DAILY NEWS PAPER

ಗಡಿ ಜಿಲ್ಲೆಯ ಧ್ವನಿ...

₹ 4 | ಸಂಪುಟ – 4 | ಸಂಚಿಕೆ – 315 | ಪುಟ – 4 | RNI . KARKAN/2020/79084 | ADVRT EMAIL. BELAGAVIVARADIEDITOR@GMAIL.COM | NEWSBELAGAVI@GMAIL.COM | 9900332089 | REG.NO G-2/PMG/KA/NK/BM/139/2024-26


## ಎಚ್‌ಎಸ್‌ಆರ್‌ಪಿ ನಂಬರ್ ಪ್ಲೇಟ್ ಅಳವಡಿಕೆಗೆ ಅವಧಿ ವಿಸ್ತರಣೆ



ಬೆಂಗಳೂರು: ವಾಹನಗಳಿಗೆ ಹೆಚ್.ಎಸ್.ಆರ್ಪಿ ನಂಬರ್ ಪ್ಲೇಟ್ ಅಳವಡಿಕೆಗೆ ಸಾರಿಗೆ ಇಲಾಖೆ ನೀಡಿದ್ದ ಗಡುವು ಇನ್ನೇನು ಮುಗಿಯಲು ಕೇವಲ ಎರಡು ದಿನ ಮಾತ್ರ ಬಾಕಿ ಇರುವಾಗ ಸರ್ಕಾರ ಗಡುವು ವಿಸ್ತರಣೆ ಮಾಡಿದೆ.

ಏಪ್ರಿಲ್ 2019ಕ್ಕಿಂತ ಮೊದಲು ನೋಂದಣಿ ಮಾಡಿಸಿದ್ದ ಹಳೆಯ ವಾಹನಗಳಿಗೆ ಹೈ ಸೆಕ್ಯುರಿಟಿ ರಿಜಿಸ್ಟ್ರೇಷನ್ ನಂಬರ್ ಪ್ಲೇಟ್ **(HSRP)** ಅವಳಡಿಕೆ ಕಡ್ಡಾಯ ಮಾಡಿ ಸಾರಿಗೆ ಇಲಾಖೆ ಆದೇಶ ಹೊರಡಿಸಿತ್ತು.

ಫೆಬ್ರವರಿ 17ರೊಳಗೆ ಹೆಚ್.ಎಸ್.ಆರ್ಪಿ ನಂಬರ್ ಪ್ಲೇಟ್ ಅಳವಡಿಸುವಂತೆ ಡೆಡ್ ಲೈನ್ ನೀಡಿತ್ತು.

ವಾಹನಗಳಿಗೆ ಹೆಚ್.ಎಸ್.ಆರ್ಪಿ ನಂಬರ್ ಪ್ಲೇಟ್ ವಿಚಾರ ಇದೀಗ ವಿಧಾನಪರಿಷತ್ ನಲ್ಲಿ ಪ್ರಸ್ತಾಪವಾಗಿದ್ದು, ಈ ಬಗ್ಗೆ ಪರಿಷತ್ ಸದಸ್ಯ ಮಾದೇಗೌಡ ಪ್ರಶ್ನಿಸಿದ್ದು, ಅವಧಿ ವಿಸ್ತರಿಸಲು ಮನವಿ ಮಾಡಿದ್ದಾರೆ. ಇದಕ್ಕೆ ಉತ್ತರಿಸಿದ ಸಾರಿಗೆ ಸಚಿವ ರಾಮಲಿಂಗಾ ರೆಡ್ಡಿ, ವಾಹನಗಳಿಗೆ ಹೆಚ್.ಎಸ್.ಆರ್ಪಿ ನಂಬರ್ ಪ್ಲೇಟ್ ಅಳವಡಿಕೆಗೆ ಇನ್ನೂ 3 ತಿಂಗಳು ಅವಧಿ ವಿಸ್ತರಣೆ ಮಾಡುವುದಾಗಿ ತಿಳಿಸಿದರು.

## ಹೈಕೋರ್ಟ್ ಹಾಕಿದ 10 ಸಾವಿರ ದಂಡ ಪ್ರಶ್ನಿಸಿ ಸುಪ್ರೀಂ ಮೆಟ್ಟಿಲೇರಿದ ಸಿಎಂ ಸಿದ್ದು

ಬೆಂಗಳೂರು: ರಸ್ತೆ ತಡೆದು ಪ್ರತಿಭಟನೆ ನಡೆಸಿ ಸಾರ್ವಜನಿಕರಿಗೆ ತೊಂದರೆ ನೀಡಿದ ವಿಚಾರವಾಗಿ ಕರ್ನಾಟಕ ಹೈಕೋರ್ಟ್ 10 ಸಾವಿರ ರೂ. ದಂಡ ವಿಧಿಸಿರುವುದನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಸುಪ್ರೀಂ ಕೋರ್ಟ್ನಲ್ಲಿ ಪ್ರಶ್ನಿಸಿದ್ದಾರೆ. ಪ್ರಕರಣದಲ್ಲಿ ಸಿಎಂ ಸಿದ್ದರಾಮಯ್ಯ ಸೇರಿ ಕೆಲ ನಾಯಕರಿಗೆ ದಂಡ ವಿಧಲಾಗಿತ್ತು. ಅಲ್ಲದೆ, ಮಾರ್ಚ್ 6 ರಂದು ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯಕ್ಕೆ ಹಾಜರಾಗುವಂತೆ ಸೂಚನೆ ನೀಡಲಾಗಿತ್ತು.

2022ರ ಏಪ್ರಿಲ್ನಲ್ಲಿ ರಸ್ತೆ ತಡೆದು ಪ್ರತಿಭಟನೆ ನಡೆಸಿದ್ದ ಪ್ರಕರಣ ಅದಾಗಿತ್ತು. ಕೆಎಸ್ ಈಶ್ವರಪ್ಪ ರಾಜೀನಾಮೆಗೆ ಆಗ್ರಹಿಸಿ ಕಾಂಗ್ರೆಸ್ ನಾಯಕರು ಪ್ರತಿಭಟನೆ ನಡೆಸಿದ್ದರು. ಕಾಂಗ್ರೆಸ್ ನಾಯಕರು ವಿಧಾನಸೌಧದ ಚಲೋ ಕೈಗೊಂಡಿದ್ದರು. ಅಂದಿನ ಬಿಜೆಪಿ ಸರ್ಕಾರ 'ಕೈ' ನಾಯಕರ ವಿರುದ್ಧ ದೂರು ನೀಡಿತ್ತು.

ಪ್ರಕರಣದ ವಿಚಾರಣೆ ನಡೆಸಿದ್ದ ಹೈಕೋರ್ಟ್ ಸಿಎಂ ಸಿದ್ದರಾಮಯ್ಯ ಸೇರಿದಂತೆ ಕೆಲವು ನಾಯಕರಿಗೆ ದಂಡ ವಿಧಿಸಿತ್ತು. ಆದರೆ,



ನಮ್ಮ ಪ್ರತಿಭಟನೆ ಕಾನೂನು ಬದ್ಧವಾಗಿತ್ತು ಎಂದಿರುವ ಸಿದ್ದರಾಮಯ್ಯ, ಸುಪ್ರೀಂ ಕೋರ್ಟ್ಗ ಮೇಲ್ಮನವಿ ಸಲ್ಲಿಸಿದ್ದಾರೆ.

ಸಿದ್ದರಾಮಯ್ಯ ಮಾತ್ರವಲ್ಲದೆ, ರಾಜ್ಯ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸುರ್ಜೇವಾಲಾ, ಸಚಿವ ಎಂ.ಬಿ.ಪಾಟೀಲ್, ಸಚಿವ ರಾಮಲಿಂಗಾರೆಡ್ಡಿ ಅವರಿಗೂ ಪ್ರಕರಣಕ್ಕೆ ಸಂಬಂಧಿಸಿ ನ್ಯಾಯಾಲಯಕ್ಕೆ ಹಾಜರಾಗುವಂತೆ ನ್ಯಾಯಮೂರ್ತಿ ಕೃಷ್ಣ ಎಸ್ ದೀಕ್ಷಿತ್ ಅವರಿದ್ದ ಪೀಠ ಆದೇಶ ಹೊರಡಿಸಿತ್ತು.

ಹೈಕೋರ್ಟ್‌ನಲ್ಲಿ ಮೇಲ್ಮನವಿ ಸಲ್ಲಿಸುವವರೆಗೆ ಆದೇಶವನ್ನು ಅಮಾನತುಗೊಳಿಸುವಂತೆ ಸಿಎಂ ಸಿದ್ದರಾಮಯ್ಯ ಪರ ವಕೀಲರು ಹೈಕೋರ್ಟ್‌ಗೆ ಮನವಿ ಮಾಡಿದ್ದರಾದರೂ ಈ ಮನವಿಯನ್ನು ನ್ಯಾಯಾಲಯ ತಿರಸ್ಕರಿಸಿತ್ತು.

ಜನಪ್ರತಿನಿಧಿಗಳಿಗೆ ಚಾಟಿ ಬೀಸಿದ್ದ ಕೋರ್ಟ್: ಜನಪ್ರತಿನಿಧಿಗಳಾದವರು ಕಾನೂನು ಪಾಲಿಸಿದರೆ ಜನರೂ ಸಹ ಕಾನೂನು ಪಾಲಿಸುತ್ತಾರೆ. ಸಾರ್ವಜನಿಕರಿಗೆ ತೊಂದರೆಯಾಗುವಂತೆ ರಸ್ತೆಯಲ್ಲಿ ಪ್ರತಿಭಟನೆ ನಡೆಸಿದರೆ ಜನರಿಗೆ ಕಷ್ಟವಾಗುತ್ತದೆ. ಸಿಟಿ ಲೈಫ್ ಈಸ್ ಟಾರ್ಚರ್, ಪ್ರತಿಭಟನೆಗಳಿಂದ ಜನರಿಗೆ ಮತ್ತಷ್ಟು ತೊಂದರೆಯಾಗುತ್ತದೆ. ಜನಪ್ರತಿನಿಧಿಯಾದ ಕಾರಣಕ್ಕೆ ರಸ್ತೆ ಅಡ್ಡಗಟ್ಟುವುದನ್ನು ಒಪ್ಪಲು ಸಾಧ್ಯವಿಲ್ಲ. ಜನ ನಾಯಕರಾದವರು ಮೊದಲು ಕಾನೂನು ಪಾಲಿಸಬೇಕು ಎಂದು ನ್ಯಾಯಾಲಯ ಚಾಟಿ ಬೀಸಿತ್ತು.

## ಸೋನಿಯಾ ಗಾಂಧಿ ರಾಜಸ್ಥಾನದಿಂದ ಸ್ಪರ್ಧೆ



ನವದೆಹಲಿ: ಕಾಂಗ್ರೆಸ್‌ನ ಮಾಜಿ ಅಧ್ಯಕ್ಷೆ ಸೋನಿಯಾ ಗಾಂಧಿ ಅವರು ಮುಂಬರುವ ರಾಜ್ಯಸಭಾ ಚುನಾವಣೆಗೆ ರಾಜಸ್ಥಾನದಿಂದ ಬುಧವಾರ ನಾಮಪತ್ರ ಸಲ್ಲಿಸಲಿದ್ದಾರೆ ಎಂದು ಪಕ್ಷದ ಮೂಲಗಳು ತಿಳಿಸಿವೆ.

ಐದು ಅವಧಿಗೆ ಲೋಕಸಭೆ ಸಂಸದೆಯಾಗಿ ಸೇವೆ ಸಲ್ಲಿಸಿದ ನಂತರ 77 ವರ್ಷದ ಸೋನಿಯಾ ಗಾಂಧಿ ಮೊದಲ ಬಾರಿಗೆ ರಾಜ್ಯಸಭಾ ಚುನಾವಣೆಗೆ ಸ್ಪರ್ಧಿಸುತ್ತಿದ್ದಾರೆ.

ಪಕ್ಷದ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಸೋನಿಯಾ ಗಾಂಧಿ ಅವರ ಪುತ್ರ ರಾಹುಲ್ ಗಾಂಧಿ ಮತ್ತು ಪುತ್ರಿ ಪ್ರಿಯಾಂಕಾ ಗಾಂಧಿ ವಾದ್ರಾ ಅವರು ನಾಮಪತ್ರ ಸಲ್ಲಿಸುವ ಸಂದರ್ಭದಲ್ಲಿ ಭಾಗಿಯಾಗಲಿದ್ದಾರೆ ಎಂದು ಕಾಂಗ್ರೆಸ್ ಮೂಲಗಳು ತಿಳಿಸಿವೆ.

ತೆಲಂಗಾಣ ಮುಖ್ಯಮಂತ್ರಿ ರೇವಂತ್ ರೆಡ್ಡಿ ಕಳೆದ ವಾರ ಸೋನಿಯಾ ಗಾಂಧಿ ಅವರನ್ನು ಮುಂಬರುವ ಲೋಕಸಭೆ ಚುನಾವಣೆಯಲ್ಲಿ ರಾಜ್ಯದ ಖಮ್ಮಂ ಕ್ಷೇತ್ರದಿಂದ ಸ್ಪರ್ಧಿಸುವಂತೆ ಒತ್ತಾಯಿಸಿದ್ದರು. 15 ರಾಜ್ಯಗಳ 56 ಸ್ಥಾನಗಳಿಗೆ ರಾಜ್ಯಸಭಾ ಚುನಾವಣೆ ಫೆಬ್ರವರಿ 27 ರಂದು ನಡೆಯಲಿದೆ. ನಾಮಪತ್ರ ಸಲ್ಲಿಸಲು ಫೆಬ್ರವರಿ 15 ಕೊನೆಯ ದಿನಾಂಕವಾಗಿದೆ.

1999 ರಿಂದ ಸೋನಿಯಾ ಗಾಂಧಿ ಲೋಕಸಭೆ ಚುನಾವಣೆಯನ್ನು ಗೆಲ್ಲುತ್ತಾ ಬಂದಿದ್ದಾರೆ. 1999 ರಲ್ಲಿ ಉತ್ತರ ಪ್ರದೇಶದ ಅಮೇಠಿ ಮತ್ತು ಕರ್ನಾಟಕದ ಬಳ್ಳಾರಿಯಿಂದ ಸ್ಪರ್ಧಿಸಿ ಗೆದ್ದಿದ್ದ ಅವರು 2004ರ ಚುನಾವಣೆಯಿಂದ 2019ರ ಚುನಾವಣೆಯವರೆಗೂ ಉತ್ತರ ಪ್ರದೇಶದ ರಾಯ್‌ಬರೇಲಿಯಿಂದ ಸತತವಾಗಿ ಆಯ್ಕೆ ಆಗಿದ್ದರು. ಅನಾರೋಗ್ಯ ಕಾರಣದಿಂದ 2024ರ ಲೋಕಸಭಾ ಚುನಾವಣೆಗೆ ಸೋನಿಯಾ ಗಾಂಧಿ ಸ್ಪರ್ಧಿಸುತ್ತಿಲ್ಲ ಎಂಬ ಮಾತು ರಾಜಕೀಯ ವಲಯದಲ್ಲಿ ಹರಿದಾಡಿತ್ತು.

## ಬೆಳಗಾವಿಯಲ್ಲಿರುವ ಮರಾಠಿ ಭಾಷಿಗರು ಕೂಡ ಕರ್ನಾಟಕದವರೇ: ಡಿಸಿಎಂ ಡಿ.ಕೆ.ಶಿವಕುಮಾರ್

ಬೆಂಗಳೂರು: ಬೆಳಗಾವಿಯಲ್ಲಿ ಇರುವ ಮರಾಠಿ ಭಾಷಿಗರು ಕೂಡ ಕರ್ನಾಟಕದವರೇ. ಎಲ್ಲರೂ ಐಕ್ಯತೆಯಿಂದ ಒಟ್ಟಿಗೆ ಹೋಗುವುದು ಮೊದಲ ಕರ್ತವ್ಯವಾಗಬೇಕು. ಕರ್ನಾಟಕದ ಭೂಮಿ, ನಮ್ಮ ಕನ್ನಡ ಭಾಷೆಗೆ ಮೊದಲ ಆದ್ಯತೆ ಎಂದು ಡಿಸಿಎಂ ಡಿ.ಕೆ.ಶಿವಕುಮಾರ್ ಅವರು ಹೇಳಿದರು.

ಕೆಪಿಸಿಸಿ ಕಚೇರಿ ಬಳಿ ಮಾಧ್ಯಮಗಳ ಪ್ರಶ್ನೆಗಳಿಗೆ ಶಿವಕುಮಾರ್ ಅವರು ಬುಧವಾರ ಪ್ರತಿಕ್ರಿಯಿಸಿದರು. ಬೆಳಗಾವಿಯಲ್ಲಿ ಎಂಇಎಸ್ ಪುಂಡಾಟಿಕೆ ಹೆಚ್ಚುತ್ತಿದ್ದು, ಕಚೇರಿ ತೆರೆಯಲು ಮಹಾರಾಷ್ಟ್ರ ಸರ್ಕಾರಕ್ಕೆ ಮನವಿ ಮಾಡಿದ್ದಾರೆ ಎನ್ನುವ ಪ್ರಶ್ನೆಗೆ ಅವರು ಉತ್ತರಿಸಿದ್ದು ಹೀಗೆ.

ಬೆಳಗಾವಿಯ ಗ್ರಾಮೀಣ ಭಾಗದ ಜನರಿಗೆ ನಮ್ಮ ಸರ್ಕಾರ ಸಾಕಷ್ಟು ಅನುಕೂಲತೆಗಳನ್ನು ಕಲ್ಪಿಸಿಕೊಟ್ಟಿದೆ. ಅವರು ನಮ್ಮ ನೀರು, ಗಾಳಿ ಕುಡಿಯುತ್ತಿದ್ದಾರೆ. ನಮ್ಮ ಭೂಮಿಯಲ್ಲಿ ವಾಸವಾಗಿದ್ದಾರೆ, ವ್ಯವಸಾಯ ಮಾಡುತ್ತಿದ್ದಾರೆ. ಈ ಬಜೆಟ್ ಅಲ್ಲಿ



ಬೆಳಗಾವಿ ಗ್ರಾಮೀಣ ಭಾಗದ ಕೃಷಿ ಭೂಮಿಗಳಿಗೆ ನೀರನ್ನು ಒದಗಿಸಲು ರೂ.900 ಕೋಟಿ ವೆಚ್ಚದಲ್ಲಿ ಯೋಜನೆ ಘೋಷಣೆ ಮಾಡಲಿದ್ದೇವೆ ಎಂದರು.

ಲೋಕಸಭಾ ಚುನಾವಣೆ ವಿಚಾರವಾಗಿ ಕೇಳಿದಾಗ ಲೋಕಸಭಾ ಅಭ್ಯರ್ಥಿಗಳ ಪಟ್ಟಿಯನ್ನು ಬಹುತೇಕ ಅಂತಿಮ ಹಂತಕ್ಕೆ ತೆಗೆದುಕೊಂಡು ಹೋಗುತ್ತೇವೆ. ಈ ವಿಚಾರವಾಗಿ ನಾನು ಮತ್ತು ಮುಖ್ಯಮಂತ್ರಿಗಳು ಒಂದು ಸುತ್ತಿನ ಮಾತುಕಥೆ ನಡೆಸಿದ್ದೇವೆ. ಈಗ ಎಐಸಿಸಿ ಪ್ರಧಾನ ಕಾರ್ಯದರ್ಶಿಗಳ ಜತೆ ಸಭೆ ಮಾಡುತ್ತೇವೆ, ನಂತರ ಸ್ಕ್ರೀನಿಂಗ್ ಸಮಿತಿ ಸದಸ್ಯರು ಚರ್ಚಿಸಿ ಹೈಕಮಾಂಡಿಗೆ ಪಟ್ಟಿ ಕಳಿಸುತ್ತೇವೆ ಎಂದರು.

ರಾಜ್ಯಸಭೆಗೆ ರಾಜ್ಯದಿಂದ ಹೆಸರು ಸೂಚಿಸಲಾಗುವುದೇ ಎಂದು ಕೇಳಿದಾಗ, "ರಾಜ್ಯಸಭೆಗೆ ನಾವು ಹೆಸರುಗಳನ್ನು ಸೂಚಿಸುತ್ತೇವೆ. ನಂತರ ಹೈಕಮಾಂಡ್ ಅಂತಿಮ ತೀರ್ಮಾನ ಮಾಡಲಿದೆ" ಎಂದರು.

40 ಪರ್ಸೆಂಟ್ ಕಮಿಷನ್ ವಿಚಾರವಾಗಿ ತನಿಖೆ ನಿಧಾನಗತಿಗೆ ಹೈಕೋರ್ಟ್ ಅಸಮಾಧಾನ ವ್ಯಕ್ತಪಡಿಸಿದೆ ಎಂದಾಗ "ಹೈಕೋರ್ಟ್ ಅಭಿಪ್ರಾಯವನ್ನು ಗೌರವಿಸುತ್ತೇವೆ. ನಾವು ತನಿಖೆಯನ್ನು ಸಮಿತಿಗೆ ನೀಡಿದ್ದು, ಅವರ ಕರ್ತವ್ಯ ಅವರು ಮಾಡುತ್ತಾರೆ ಎಂದರು.

## ಅಕ್ರಮವಾಗಿ ಸಾಗಿಸ್ತಿದ್ದ 110ಕ್ಕೂ ಹೆಚ್ಚು ಗೋವುಗಳ ರಕ್ಷಣೆ; ಓರ್ವನ ಬಂಧನ



ವಿಜಯಪುರ: ಅಕ್ರಮವಾಗಿ ಸಾಗಿಸುತ್ತಿದ್ದ ಗೋವುಗಳನ್ನು ಗ್ರಾಮಸ್ಥರೇ ತಡೆದು ಚಾಲಕನನ್ನು ಪೊಲೀಸರಿಗೆ ಒಪ್ಪಿಸಿದ ಘಟನೆ ವಿಜಯಪುರ ಜಿಲ್ಲೆಯ ಇಂಡಿ ತಾಲೂಕಿನ ಹಿರೇಬೇವನೂರು ಗ್ರಾಮದಲ್ಲಿ ನಡೆದಿದೆ.

ಮಹಾರಾಷ್ಟ್ರದಿಂದ ವಿಜಯಪುರ ಜಿಲ್ಲೆಯ ಸಿಂದಗಿಗೆ ಬೊಲೆರೊ ಪಿಕ್‌ಅಪ್, ಗೂಡ್ಸ್ ವಾಹನ ಸೇರಿದಂತೆ ಒಟ್ಟು ಮೂರು ವಾಹನಗಳಲ್ಲಿ ಮಧ್ಯರಾತ್ರಿ ಅಕ್ರಮವಾಗಿ 110ಕ್ಕೂ ಹೆಚ್ಚು ಗೋವುಗಳನ್ನು ಸಾಗಿಸುತ್ತಿದ್ದರು. ಖಚಿತ ಮಾಹಿತಿ ಮೇರೆಗೆ ಹಿರೇಬೇವನೂರು ಗ್ರಾಮಸ್ಥರು ವಾಹನಗಳನ್ನು ತಡೆಯುತ್ತಿದ್ದಂತೆ ಇಬ್ಬರು ಚಾಲಕರು ಪರಾರಿಯಾಗಿದ್ದಾರೆ.

ಇನ್ನು ಜನರ ಕೈಗೆ ಸಿಕ್ಕಿ ಬಿದ್ದ ಓರ್ವ ಚಾಲಕನನ್ನು ಗ್ರಾಮಸ್ಥರು ಪೊಲೀಸರಿಗೊಪ್ಪಿಸಿದ್ದಾರೆ. 3 ವಾಹನಗಳಲ್ಲಿಯೂ ಆಕಳು ಹಾಗೂ ಕರುಗಳ ಕಾಲುಗಳನ್ನು ಕಟ್ಟಿ ಹಾಕಲಾಗಿತ್ತು. ಇದರಿಂದ ಉಸಿರುಗಟ್ಟಿ ವಾಹನದಲ್ಲೇ 1 ಗೋವು ಮತ್ತು 11 ಕರುಗಳು ಮೃತಪಟ್ಟಿವೆ. ಸ್ಥಳಕ್ಕೆ ಆಗಮಿಸಿದ ಇಂಡಿ ಗ್ರಾಮೀಣ ಠಾಣೆ ಪೊಲೀಸರು ಪರಿಶೀಲನೆ ನಡೆಸಿದ್ದಾರೆ. ಮೃತಪಟ್ಟಿದ್ದ 1 ಗೋವು, 11 ಕರುಗಳ ಮರಣೋತ್ತರ ಪರೀಕ್ಷೆ ನಡೆಸಿ ಅಂತ್ಯಕ್ರಿಯೆ ಮಾಡಲಾಗಿದೆ. ಜೊತೆಗೆ ಅಕ್ರಮವಾಗಿ ಸಾಗಿಸುತ್ತಿದ್ದ ಗೋವುಗಳನ್ನು ಪೊಲೀಸರು ಗೋಶಾಲೆಗೆ ಕಳುಹಿಸಿದ್ದಾರೆ. ಈ ಕುರಿತು ಇಂಡಿ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಎಲ್ಲಿಂದ, ಎಲ್ಲಿಗೆ ಹಾಗೂ ಯಾರಿಗೆ ಸಾಗಾಟ ಮಾಡುತ್ತಿದ್ದರು ಎಂಬ ವಿಚಾರ ತನಿಖೆಯಿಂದ ಬಹಿರಂಗವಾಗಬೇಕಿದೆ.

## ಆಶಾ ಕಾರ್ಯಕರ್ತೆಯರ ಬ್ಯಾಂಕ್ ಖಾತೆಗೆ 7,000 ರೂ. ವರ್ಗಾವಣೆಗೆ ಕ್ರಮ: ಸಚಿವ ದಿನೇಶ್ ಗುಂಡೂರಾವ್



ಬೆಂಗಳೂರು: ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಪ್ರತಿಭಟನೆ ನಡೆಸುತ್ತಿರುವ ಆಶಾ ಕಾರ್ಯಕರ್ತೆಯರನ್ನುಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಭೇಟಿ ಮಾಡಿ ಅಹವಾಲು ಆಲಿಸಿದರು. ಆಶಾ ಕಾರ್ಯಕರ್ತೆಯರ ಬ್ಯಾಂಕ್ ಖಾತೆಗಳಿಗೆ ಈಗಿರುವ 5,000 ರೂ.ಗೆ ಬದಲಾಗಿ 7,000 ರೂ. ವರ್ಗಾವಣೆ ಮಾಡಲು ಕ್ರಮಕೈಗೊಳ್ಳಲಾಗುವುದು. ಹೀಗಾಗಿ ಪ್ರತಿಭಟನೆ ಹಿಂಪಡೆಯಬೇಕು ಎಂದು ಅವರು ಮನವಿ ಮಾಡಿದ್ದಾರೆ. ಆದರೆ, ಪಟ್ಟು ಬಿಡದ ಆಶಾ ಕಾರ್ಯಕರ್ತೆಯರು ಮುಖ್ಯಮಂತ್ರಿಗಳು ಮಧ್ಯಸ್ಥಿಕೆ ವಹಿಸುವಂತೆ ಆಗ್ರಹಿಸಿ ಪ್ರತಿಭಟನೆ ಮುಂದುವರಿಸಲು ನಿರ್ಧರಿಸಿದ್ದಾರೆ.

ರಾಜ್ಯದಲ್ಲಿ ಶೇ 50 ರಷ್ಟು ಆಶಾ ಕಾರ್ಯಕರ್ತೆಯರಿಗೆ ಅವರು ಮಾಡಿದ ಕೆಲಸಕ್ಕೆ ತಕ್ಕ ವೇತನ ಸಿಗುತ್ತಿಲ್ಲ ಎಂದು ಅವರು ಆರೋಪಿದ್ದಾರೆ.

ಅಲ್ಲದೆ, ರಿಪ್ರೊಡಕ್ಟಿವ್ ಆ್ಯಂಡ್ ಚೈಲ್ಡ್ ಹೆಲ್ತ್ (ಆರ್ಸಿಎಚ್) ಪೋರ್ಟಲ್ ಅನ್ನು ಪಾವತಿ ಪ್ರಕ್ರಿಯೆಯಿಂದ ಡಿಲಿಂಕ್ ಮಾಡಿ, 15,000 ರೂ. ನಿಗದಿತ ಗೌರವಧನವಾಗಿ ನೀಡಬೇಕು ಎಂದು ಅವರು ಒತ್ತಾಯಿಸಿದ್ದಾರೆ.

7,000 (ಅಸ್ತಿತ್ವದಲ್ಲಿರುವ 5,000 ರೂ. ಗೌರವಧನ ಮತ್ತು 2,000 ರೂ. ನಾನ್ – ಎಂ ಸಿ ಟಿ ಎ ಸ್ ಒಟ್ಟಿಗೆ ಸೇರಿಸಿ) ನೇರವಾಗಿ ವರ್ಗಾವಣೆ ಮಾಡುವುದಾಗಿ ಸಚಿವರು ಭರವಸೆ ನೀಡಿದ್ದಾರೆ. ಆಶಾ ಕಾರ್ಯಕರ್ತೆಯರಿಗೆ ತಮ್ಮ ಚಟುವಟಿಕೆಗಳನ್ನು ಅಪ್‌ಲೋಡ್ ಮಾಡಲು ಮತ್ತು ಟ್ರ್ಯಾಕ್ ಮಾಡಲು ಸಹಾಯ ಮಾಡುವ ಸಾಫ್ಟ್‌ವೇರ್ ಅನ್ನು ಸರ್ಕಾರ ಅಭಿವೃದ್ಧಿಪಡಿಸುತ್ತಿದೆ ಎಂದು ಹೇಳಿದ್ದಾರೆ.

ನೂತನ ಸಾಫ್ಟ್ವೇರ್ ಪಾವತಿ ವ್ಯವಸ್ಥೆಯನ್ನು ಹೆಚ್ಚು ಪಾರದರ್ಶಕಗೊಳಿಸುತ್ತದೆ ಎಂದು ಅವರು ಹೇಳಿದ್ದಾರೆ. ಅಲ್ಲದೆ, ಆಶಾ ಕಾರ್ಯಕರ್ತೆಯರಿಗೆ ನಿಗದಿತ ಗೌರವಧನವನ್ನು ಒದಗಿಸುವ ಬಗ್ಗೆ ಮುಖ್ಯಮಂತ್ರಿಗಳೊಂದಿಗೆ ಚರ್ಚಿಸುವುದಾಗಿ ಭರವಸೆ ನೀಡಿದ್ದಾರೆ.

ಆಶಾ ಕಾರ್ಯಕರ್ತೆಯರ ಬೇಡಿಕೆಗಳೇನು? ಆರೋಗ್ಯ ಸಚಿವರ ಭರವಸೆಗಳು ಬೇಡಿಕೆಗಳನ್ನು ಪೂರ್ತಿಯಾಗಿ ಈಡೇರಿಸುವಂತಿಲ್ಲದ ಕಾರಣ ಕಾರ್ಯಕರ್ತೆಯರು ಪ್ರತಿಭಟನೆಯನ್ನು ಮುಂದುವರೆಸಲು ನಿರ್ಧರಿಸಿದ್ದಾರೆ.

ಆಶಾ ಕಾರ್ಯಕರ್ತೆಯರನ್ನು ಕಾರ್ಮಿಕರೆಂದು ಪರಿಗಣಿಸಿ ಕನಿಷ್ಠ ವೇತನ, ಪಿಎಫ್, ಇಎಸ್‌ಐ, ಗ್ರಾಚ್ಯುಟಿ ಸೌಲಭ್ಯಗಳನ್ನು ನೀಡಬೇಕು. ನಗರಗಳಲ್ಲಿ ಕೆಲಸ ಮಾಡುವ ಕಾರ್ಯಕರ್ತೆಯರಿಗೆ 2,000 ರೂ ಗೌರವಧನ ಹೆಚ್ಚಿಸುವುದು ಇತ್ಯಾದಿಗಳು ಅವರ ಇತರ ಬೇಡಿಕೆಗಳಾಗಿವೆ.

## ರೈತರ ಬಂಧನ ಪ್ರಕರಣ; ತುರ್ತು ಕ್ರಮಕ್ಕೆ ಸ್ಪೀಕರ್ ಸೂಚನೆ



ಬೆಂಗಳೂರು: ಪ್ರತಿಭಟನೆಗಾಗಿ ದೆಹಲಿಗೆ ತೆರಳುತ್ತಿದ್ದ ರೈತರನ್ನು ದೇಶಾದ್ಯಂತ ಬಂಧಿಸಲಾಗಿದೆ. ಈ ಪೈಕಿ ಕರ್ನಾಟಕದ ರೈತರೂ ಸಹ ಸೆರೆಯಾಗಿದ್ದು, ಅವರ ಬಿಡುಗಡೆಗೆ ಸರ್ಕಾರ ತುರ್ತು ಕ್ರಮ ಕೈಗೊಳ್ಳಬೇಕು ಎಂದು ರೈತ ಸಂಘದ ಶಾಸಕ ದರ್ಶನ್ ಪುಟ್ಟಣ್ಣಯ್ಯ ಬುಧವಾರ ಸದನದಲ್ಲಿ ದನಿಯತ್ತಿದರು.

ರೈತರ ಬಂಧನ ಖಂಡನೀಯ. 70 ಬಂಧಿತ ರೈತರ ಪೈಕಿ 25 ಮಂದಿ ಮಹಿಳೆಯರೂ ಇದ್ದಾರೆ. ಅವರ ಬಿಡುಗಡೆಗೆ ಸರ್ಕಾರ ಕೂಡಲೇ ಪ್ರಯತ್ನಿಸಬೇಕು ಎಂದು ಅವರು ಸ್ಪೀಕರ್ ಬಳಿ ಮನವಿ ಮಾಡಿದರು.

ಇದಕ್ಕೆ ಉತ್ತರ ನೀಡಿದ ಸಚಿವ ಮಹದೇವಪ್ಪ, ಪ್ರತಿಭಟನೆ ಹಾಗೂ ಧರಣಿಗಳು ಜನಸಾಮಾನ್ಯರ ಹಕ್ಕು. ಇದನ್ನು ಹತ್ತಿಕ್ಕುವುದು ತಪ್ಪು. ಸರ್ಕಾರ ಈ ಬಗ್ಗೆ ಈಗಾಗಲೇ ಕ್ರಮಕ್ಕೆ ಮುಂದಾಗಿದೆ. ಖುದ್ದು ಮುಖ್ಯಮಂತ್ರಿ ಹಾಗೂ ಗೃಹಸಚಿವರೇ ಈ ಬಗ್ಗೆ ಸಭೆಗೆ ಸ್ಪಷ್ಟೀಕರಣ ನೀಡಲಿದ್ದಾರೆ ಎಂದರು.

ಸಭಾಪತಿ ಯು.ಟಿ. ಖಾದರ್ ಮಾತನಾಡಿ, ದೆಹಲಿಗೆ ತೆರಳುತ್ತಿದ್ದ ರೈತರನ್ನು ಮಧ್ಯಪ್ರದೇಶ ಸರ್ಕಾರ ಬಂಧಿಸಿದೆ. ರಾಜ್ಯ ಸರ್ಕಾರ ಕೂಡಲೇ ಮಧ್ಯಪ್ರದೇಶ ಸರ್ಕಾರದ ಜೊತೆ ಮಾತನಾಡಿ ರೈತರ ಬಿಡುಗಡೆಗೆ ತುರ್ತು ಕ್ರಮ ಕೈಗೊಳ್ಳಬೇಕು ಎಂದು ಸೂಚಿಸಿದರು.

## ಗ್ರಾಮ ವಿಕಾಸ್ ಯೋಜನೆಯಡಿ 991 ಗ್ರಾಮಗಳ ಅಭಿವೃದ್ಧಿ

ಬೆಂಗಳೂರು: ಕಳೆದ ಮೂರು ವರ್ಷಗಳಲ್ಲಿ ರಾಜ್ಯದಲ್ಲಿ ಮುಖ್ಯಮಂತ್ರಿ ಗ್ರಾಮ ವಿಕಾಸ ಯೋಜನೆಯಡಿ ಯಾವುದೇ ಗ್ರಾಮಗಳನ್ನು ಐಕ್ಯ ಮಾಡಿಲ್ಲ ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಸಚಿವ ಪ್ರಿಯಾಂಕ ಖರ್ಗೆ ವಿಧಾನಸಭೆಯಲ್ಲಿ ತಿಳಿಸಿದರು.

ಪ್ರಶ್ನೋತ್ತರ ವೇಳೆಯಲ್ಲಿ ಬಾಗೇಪಲ್ಲಿ ಶಾಸಕ ಎಸ್. ಎನ್.ಸುಬ್ಬಾರೆಡ್ಡಿ ಅವರ ಪ್ರಶ್ನೆಗೆ ಉತ್ತರಿಸಿದ ಸಚಿವರು, ಮುಖ್ಯಮಂತ್ರಿ ಗ್ರಾಮ ವಿಕಾಸ ಯೋಜನೆಯು 2017–18 ರಲ್ಲಿ ಪ್ರಾರಂಭವಾಗಿದ್ದು, ಈ ಯೋಜನೆಯಡಿ 991 ಗ್ರಾಮಗಳನ್ನು ಆಯ್ಕೆ ಮಾಡಲಾಗಿದೆ.

ಆಯ್ಕೆಯಾಗಿರುವ ಗ್ರಾಮಗಳಲ್ಲಿ ಬಹುತೇಕ ಕಾಮಗಾರಿಗಳು ಪೂರ್ಣಗೊಂಡಿದ್ದು,



ಕೆಲವೊಂದು ಕಾಮಗಾರಿಗಳು ಜಮೀನಿನ ವಿವಾದ, ಕಾಮಗಾರಿಗಳ ಬದಲಾವಣೆ, ಸಾರ್ವಜನಿಕ ವಿರೋಧದಿಂದ ವಿಳಂಬವಾಗಿದೆ ಎಂದರು.

ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ 26 ಗ್ರಾಮಗಳು ಆಯ್ಕೆಯಾಗಿದ್ದು, 330 ಕಾಮಗಾರಿಗಳನ್ನು ಹಂಚಿಕೆ ಮಾಡಲಾಗಿದ್ದು, 294 ಕಾಮಗಾರಿಗಳು ಪೂರ್ಣಗೊಂಡಿವೆ. ಇನ್ನೂ 36 ಕಾಮಗಾರಿಗಳು ಬಾಕಿ ಇದ್ದು, ಶೀಘ್ರವೇ ಪೂರ್ಣಗೊಳಿಸಲು ಕ್ರಮ ಕೈಗೊಳ್ಳುವುದಾಗಿ ಹೇಳಿದರು.

ಆಯಾ ಇಲಾಖೆಗೆ ಸಂಬಂಧಿಸಿದ ಕಾಮಗಾರಿಗಳನ್ನು ಆಯಾ ಇಲಾಖೆಯಲ್ಲೇ ಕೈಗೊಳ್ಳಲು ಸೂಚಿಸಲಾಗಿದೆ ಎಂದರು. ಇದಕ್ಕೂ ಮುನ್ನ ಮಾತನಾಡಿದ ಸುಬ್ಬಾರೆಡ್ಡಿ, 6 ವರ್ಷವಾದರೂ ಕಾಮಗಾರಿಗಳು ಪೂರ್ಣಗೊಂಡಿಲ್ಲ. ಹಣ ಹಾಗೂ ಸಿಬ್ಬಂದಿ ಸಮಸ್ಯೆ ಇದೆ ಎಂದು ಸದನದ ಗಮನ ಸೆಳೆದರು.

## ಬೆಳಗಾವಿ: ಪತ್ನಿ ಹಿಂದೆ ಬಿದ್ದಿ ಪೋಲಿ ಪೊಲೀಸಪ್ಪನ ವಿರುದ್ಧ ಕಮೀಷನರ್ ಗೆ ದೂರು ಕೊಟ್ಟ ಪತಿ

ಬೆಳಗಾವಿ: ಪತ್ನಿ ಹಿಂದೆ ಬಿದ್ದಿ ಪೋಲಿ ಪೊಲೀಸಪ್ಪನ ವಿರುದ್ಧ ಆಕೆಯ ಪತಿ ಕಮೀಷನರ್ ಗೆ ದೂರು ಕೊಟ್ಟ ಘಟನೆ ಬೆಳಗಾವಿ ಕಮೀಷನರೇಟ್ ವ್ಯಾಪ್ತಿ ಯಲ್ಲಿರುವ ಠಾಣೆಯೊಂದರಲ್ಲಿ ನಡೆದಿದೆ.

ವಿವಾಹಿತ ಮಹಿಳೆಯೊಂದಿಗೆ ಹಿರೇಬಾಗೇವಾಡಿ ಪೊಲೀಸ್ ಠಾಣೆಯ ಅವಿವಾಹಿತ ಪೇದೆಯೋರ್ವ ( ಕಾನ್ಸಟೇಬಲ್ ) ಅಸಭ್ಯವಾಗಿ ನಡೆದುಕೊಂಡಿದ್ದು, ಆತನ ವಿರುದ್ಧ ಶಿಸ್ತು ಕ್ರಮ ಜರುಗಿಸುವಂತೆ ಮಹಿಳೆ ಪತಿ ನಗರ ಪೊಲೀಸ್ ಆಯುಕ್ತರಿಗೆ ದೂರು ನೀಡಿದ್ದು, ಈ ದೂರಿನನ್ವಯ ಪೊಲೀಸ್ ಆಯುಕ್ತರು ತನಿಖೆ ನಡೆಸಿ ವರದಿ ಸಲ್ಲಿಸುವಂತೆ ಬೆಳಗಾವಿ



ಗ್ರಾಮೀಣ ಎಸಿಪಿಗೆ ಸೂಚನೆ ನೀಡಿದ್ದಾರೆ.


ಹಿರೇಬಾಗೇವಾಡಿ ಪೊಲೀಸ್ ಠಾಣೆಯ ಅವಿವಾಹಿತ ಪೇದೆ ಮಡ್ಡೇಪ್ಪ ಮಂಟೂರ ಎಂಬಾತ ಈ ಹಿಂದೆ ಹಲಗಾ ಗ್ರಾಮದ ಬೀಟ್ ಪೇದೆಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದನು.

ಈ ವೇಳೆ ಅಲ್ಲಿಯೇ ಇದ್ದ ದಾಬಾ ಮಾಲೀಕನೊಂದಿಗೆ ಪರಿಚಯ ವಾಗಿದ್ದಾನೆ. ಬಿಟ್ ಪೊಲೀಸ್ ಆಗಿದ್ದರಿಂದ ಅಲ್ಲಿಯೇ ಊಟ ಮಾಡಿ ವಿಶ್ರಾಂತಿ ಪಡೆಯಲು ಆರಂಭಿಸಿದ್ದಾನೆ.

ಬಳಿಕ ಈ ಪೋಲಿ ಪೊಲೀಸಪ್ಪ ದಾಬಾ ಮಾಲೀಕನ ಪತ್ನಿಯೊಂದಿಗೆ ಸ್ನೇಹ ಬೆಳೆಸಿ ಅನುಚಿತವಾಗಿ ವರ್ತನೆ ನಡೆಸಿದ್ದಾನೆ.

ಈ ವಿಚಾರವಾಗಿ ನೊಂದ ವ್ಯಕ್ತಿ ಠಾಣೆಗೆ ತೆರಳಿ ಅಧಿಕಾರಿಗಳ ಗಮನಕ್ಕೆ ತಂದಿದ್ದಾನೆ. ಈ ವೇಳೆ ಅಧಿಕಾರಿಗಳು ಆತನನ್ನು ತೀವ್ರ ತರಾಟೆಗೆ ತೆಗೆದುಕೊಂಡು ಬುದ್ದಿಮಾತು ಹೇಳಿದ್ದಾರೆ. ಆದರೂ ತನ್ನ ಹಳೆಯ ಚಾಳಿ ಬೀಡದ ಪೇದೆ ತನ್ನ ದುರ್ಬುದ್ದಿಯನ್ನು ಮುಂದುವರಿಸಿದ್ದರಿಂದ ಮಹಿಳೆಯ ಪತಿ ನಗರ ಪೊಲೀಸ್ ಆಯುಕ್ತರಿಗೆ ದೂರು ನೀಡಿದ್ದಾನೆ.

## ಸತತ 8 ಅವಧಿಗೆ ಒಂದೇ ಕ್ಷೇತ್ರದಿಂದ ಆಯ್ಕೆಯಾಗಿ ದಾಖಲೆ ನಿರ್ಮಿಸಿದ ಹೊರಟ್ಟಿಗೆ ವಿಧಾನಪರಿಷತ್ ನಲ್ಲಿ ಅಭಿನಂದನೆ



ಬೆಂಗಳೂರು: ಸತತ ಎಂಟು ಅವಧಿಗೆ ಒಂದೇ ಕ್ಷೇತ್ರದಿಂದ ಆಯ್ಕೆಯಾಗಿ ಲಿಮ್ಕಾ ಬುಕ್ ಆಫ್ ರೆಕಾರ್ಡ್ಸ್ ಗೆ ಸೇರ್ಪಡೆಯಾಗಿರುವ ವಿಧಾನಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಅವರಿಗೆ ವಿಧಾನ ಪರಿಷತ್ ನಲ್ಲಿ ಸಚಿವರು, ಸದಸ್ಯರು ಅಭಿನಂದಿಸಿದ್ದಾರೆ.

ವಿಧಾನ ಪರಿಷತ್ ನಲ್ಲಿ ಸದಸ್ಯ ಬಿ.ಕೆ. ಹರಿಪ್ರಸಾದ್, ಎಂಟು ಅವಧಿಗೆ ಆಯ್ಕೆಯಾಗಿ ದಾಖಲೆ ನಿರ್ಮಿಸಿರುವ ಸಭಾಪತಿ ಹೊರಟ್ಟಿ ಅವರ ಬಗ್ಗೆ ವಿಷಯ ಪ್ರಸ್ತಾಪಿಸಿದ್ದು, ಹೊರಟ್ಟಿ ಸೇರಿದಂತೆ ಕೇವಲ ಮೂವರು ರಾಜಕಾರಣಿಗಳ ಹೆಸರು ಮಾತ್ರ ಈ ಸಾಲಿನ ಲಿಮ್ಕಾ ಬುಕ್ ಆಫ್ ರೆಕಾರ್ಡ್ಸ್ ನಲ್ಲಿ ಸೇರ್ಪಡೆಯಾಗಿದೆ. ಇದು ಅಪರೂಪದ ಮತ್ತು ಅಸಾಧಾರಣವಾದ ಸಾಧನೆಯಾಗಿದ್ದು, ಪಕ್ಷಾತೀತವಾಗಿ ಎಲ್ಲರ ಪ್ರೀತಿ ಗಳಿಸಿದ ಕಾರಣ ಹೊರಟ್ಟಿಯವರಿಗೆ ವಿಶೇಷ ಸ್ಥಾನ ದೊರೆತಿದೆ ಎಂದು ಹೇಳಿದ್ದಾರೆ.

ಅರಣ್ಯ ಸಚಿವ ಈಶ್ವರ್ ಖಂಡ್ರೆ ಅವರು, ಕಪ್ಪು ಚುಕ್ಕೆ ಇಲ್ಲದೆ ರಾಜ್ಯದ ಜನರ ಸೇವೆ ಮಾಡಿದ ಹೊರಟಿಯವರ ಬಗ್ಗೆ ಎಷ್ಟು ಹೇಳಿದರೂ ಕಡಿಮೆ ಎಂದು ಅಭಿನಂದಿಸಿದ್ದಾರೆ. ಕೃಷಿ ಸಚಿವ ಚಲುವರಾಯಸ್ವಾಮಿ, ಸ್ನೇಹಕ್ಕೆ ಮತ್ತೊಂದು ಹೆಸರು ಬಸವರಾಜ ಹೊರಟ್ಟಿ. ತಾರತಮ್ಯ ಮಾಡದೆ ನಿಷ್ಪಕ್ಷಪಾತವಾಗಿ ನಡೆದುಕೊಂಡಿದ್ದಾರೆ ಎಂದು ಹೇಳಿದ್ದಾರೆ.

ಎಲ್ಲಾ ಪಕ್ಷಗಳ ಸದಸ್ಯರು ನನ್ನ ಸೇವೆ ಗುರುತಿಸಿ ಒಳ್ಳೆಯ ಮಾತನಾಡಿರುವುದು ಜೀವನದ ಅತ್ಯಂತ ಸಂತೋಷದ ದಿನ ಎಂದು ಹೇಳಿದ ಬಸವರಾಜ ಹೊರಟ್ಟಿ ಕೃತಜ್ಞತೆ ಸಲ್ಲಿಸಿದ್ದಾರೆ.

## ಆಫ್ ಲೈನ್-ಆನ್ಲೈನ್ ಕ್ರಿಕೆಟ್ ಬೆಟ್ಟಿಂಗ್ ನಿಯಂತ್ರಣಕ್ಕೆ ಪ್ರತ್ಯೇಕ ಕಾಯ್ದೆ ಜಾರಿ: ಡಾ. ಜಿ. ಪರಮೇಶ್ವರ್



ಬೆಂಗಳೂರು: ಆಫ್ಲೈನ್ ಕ್ರಿಕೆಟ್ ಬೆಟ್ಟಿಂಗ್ ಆಗಿರಬಹುದು ಅಥವಾ ಆನ್ಲೈನ್ ಮನಿ ಗೇಮಿಂಗ್ ನಿಂದ ಕೋಟ್ಯಾಂತರ ರೂಪಾಯಿಗಳ ಬೆಟ್ಟಿಂಗ್ ದಂಧೆ ನಡಿಯುತ್ತಿದ್ದು, ಈ ಹಿನ್ನೆಲೆಯಲ್ಲಿ ಕಠಿಣ ಕಾನೂನು ಕ್ರಮಕ್ಕೆ ಶೀಘ್ರದಲ್ಲಿ ಪ್ರತ್ಯೇಕ ಕಾಯ್ದೆಯನ್ನು ಜಾರಿಗೆ ತರಲಾಗುತ್ತದೆ ಎಂದು ಗೃಹ ಸಚಿವ ಡಾ. ಜಿ ಪರಮೇಶ್ವರ್ ತಿಳಿಸಿದರು.

ಕಾಂಗ್ರೆಸ್‌ನ ರವಿಕುಮಾರ್ ಗಣಿಗ ಅವರು ಕ್ರಿಕೆಟ್ ಬೆಟ್ಟಿಂಗ್ ಗೆ ಕಡಿವಾಣ ಹಾಕಲು ಕಠಿಣ ಕಾನೂನು ಜಾರಿಗೊಳಿಸುವಂತೆ ಗೃಹ ಸಚಿವರಲ್ಲಿ ಕೋರಿದರು. ಅದಕ್ಕೆ ಪಕ್ಷಾತೀತವಾಗಿ ಎಲ್ಲ ಶಾಸಕರು ಧ್ವನಿಗೂಡಿಸಿ, ಕ್ರಿಕೆಟ್ ಬೆಟ್ಟಿಂಗ್ ಜತೆಗೆ ಆನ್‌ಲೈನ್ ಮನಿ ಗೇಮಿಂಗ್‌ಗಳಿಗೂ ಕಡಿವಾಣ ಹಾಕಬೇಕು ಎಂದು ಆಗ್ರಹಿಸಿದರು.

ಇದಕ್ಕೆ ಉತ್ತರಿಸಿದ ಪರಮೇಶ್ವರ್, ಕ್ರಿಕೆಟ್ ಬೆಟ್ಟಿಂಗ್ ದಂಧೆಯು ರಾಜ್ಯಾದ್ಯಂತ ನಡೆಯುತ್ತಿದೆ. ಇದರಲ್ಲಿ ಸಾವಿರಾರು ಕೋಟಿ ರು. ಹಣದ ವ್ಯವಹಾರ ನಡೆಯುತ್ತಿದೆ. ಇದಕ್ಕೆ ಕಡಿವಾಣ ಹಾಕುವ ಸಲುವಾಗಿ ಕಾನೂನು ಕ್ರಮವನ್ನು ಬಿಗಿಗೊಳಿಸಲಾಗುವುದು ಎಂದು ತಿಳಿಸಿದರು.

ಜತೆಗೆ ಆನ್‌ಲೈನ್ ಮನಿ ಗೇಮಿಂಗ್‌ಗಳಿಂದಲೂ ಯುವಕರು ಹಾಳಾಗುತ್ತಿದ್ದು, ಅವುಗಳಿಗೆ ಕಡಿವಾಣ ಹಾಕಲು ನಿರ್ಧರಿಸಲಾಗಿದೆ. ಒಟ್ಟಾರೆ ಬೆಟ್ಟಿಂಗ್ ಮತ್ತು ಆನ್‌ಲೈನ್ ಗೇಮಿಂಗ್ ಗಳ ನಿಯಂತ್ರಣಕ್ಕಾಗಿ ಪ್ರತ್ಯೇಕ ಕಾಯ್ದೆ ಜಾರಿಗೊಳಿಸಲಾಗುವುದು ಎಂದರು.

## ಖಾಲಿ ಇವರು ಲೆಕ್ಕಿಗ ಕಂ ಸಹಾಯಕ ಹುದ್ದೆಗೆ ಅರ್ಜಿ ಆಹ್ವಾನ

ಧಾರವಾಡ: ರಾಜ್ಯ ಬಾಲಕಾರ್ಮಿಕ ನಿರ್ಮೂಲನೆ ಕ್ರಿಯಾ ಯೋಜನಾ ಅನ್ವಯ ಜಿಲ್ಲಾ ಬಾಲಕಾರ್ಮಿಕ ಯೋಜನಾ ಸಂಘದ ಕಛೇರಿಯಲ್ಲಿ ಖಾಲಿ ಇರುವ ಲೆಕ್ಕಿಗ ಕಂ ಸಹಾಯಕ ಸ್ಥಾನಕ್ಕೆ ಸಿಬ್ಬಂದಿಯನ್ನು ಗೌರವಧನದ ಆಧಾರದ ಮೇಲೆ ನೇಮಕಾತಿ ಮಾಡಿಕೊಳ್ಳಲು ಅರ್ಜಿ ಆಹ್ವಾನಿಸಲಾಗಿದೆ.

ಜಿಲ್ಲಾ ಬಾಲಕಾರ್ಮಿಕ ಯೋಜನಾ ಸಂಘ, ಧಾರವಾಡ ವಿಭಾಗದ ಹುಬ್ಬಳ್ಳಿಯ ಪ್ರಿಯದರ್ಶಿನಿ ಕಾಲೋನಿಯ ಅಕ್ಷಯ ಪಾರ್ಕನ ಕಾರ್ಮಿಕ ಭವನ ಸಹಾಯಕ ಆಯುಕ್ತರ ಕಚೇರಿ ಕಾರ್ಯಾಲಯದಲ್ಲಿ ಅರ್ಜಿಯನ್ನು ಪಡೆದು ಫೆಬ್ರವರಿ 28 ರ ಸಂಜೆ 5 ಗಂಟೆಯ ಒಳಗಾಗಿ ಸಲ್ಲಿಸಬೇಕು,

ಅರ್ಜಿ ಸಲ್ಲಿಸುವ ಅಭ್ಯರ್ಥಿಯು ಬಿ. ಕಾಂ ಪದವಿಯನ್ನು ಪಡೆದಿರಬೇಕು, ಆಕೌಂಟೆಂಟ್ ಹುದ್ದೆಯಲ್ಲಿ ಕನಿಷ್ಠ 5 ವರ್ಷ ಅನುಭವ ಹೊಂದಿರಬೇಕು, ಕನ್ನಡ ಮತ್ತು ಇಂಗ್ಲಿಷ್ ಮಾತನಾಡಲು ಹಾಗೂ ಉತ್ತಮ ಬರವಣಿಗೆಯ ಕೌಶಲ್ಯವನ್ನು ಹೊಂದಿರಬೇಕು, ಕಂಪ್ಯೂಟರ್ (ಎಮ್.ಎಸ್. ಆಫೀಸ್, ಟ್ಯಾಲಿ, ಇಂಟರ್ನೆಟ್ ಆಪರೇಶನ್) ಜ್ಞಾನವನ್ನು ಪಡೆದಿರಬೇಕು, ಅರ್ಜಿ ಸಲ್ಲಿಸುವ ಅಭ್ಯರ್ಥಿಯು ಕನಿಷ್ಠ 40 ವಯಸ್ಸಿನ ಒಳಗಿರಬೇಕು.

ಹೆಚ್ಚಿನ ಮಾಹಿತಿಗಾಗಿ ವೆಬ್ ಸೈಟ್ http:// dharwad.nic.in ನಲ್ಲಿ ನೋಡಬಹುದು ಎಂದು ಜಿಲ್ಲಾ ಬಾಲಕಾರ್ಮಿಕ ಯೋಜನಾ ಸಂಘದ ಸದಸ್ಯ ಕಾರ್ಯದರ್ಶಿಗಳು ಹಾಗೂ ಸಹಾಯಕ ಕಾಮೀಕ ಆಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಧಾರವಾಡ ಕರ್ನಾಟಕ ಲೋಕಾಯುಕ್ತ; ಫೆಬ್ರವರಿ 19 ರಂದು ಅಹವಾಲು ಸ್ವೀಕಾರ

ಧಾರವಾಡ: ಧಾರವಾಡ ಜಿಲ್ಲೆಯ ಕರ್ನಾಟಕ ಲೋಕಾಯುಕ್ತ ಕಚೇರಿಯ ಪೊಲೀಸ್ ಅಧಿಕಾರಿಗಳ ಸಾರ್ವಜನಿಕ ಕುಂದು ಕೊರತೆ ಸಭೆಯನ್ನು ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ ವಲಯ ಕಛೇರಿ-12 ರ ಸಭಾಂಗಣದಲ್ಲಿ ಫೆಬ್ರವರಿ 19 ರಂದು ಬೆಳಗ್ಗೆ 11 ಗಂಟೆಯಿಂದ ಮಧ್ಯಾಹ್ನ 2 ಗಂಟೆಯವರೆಗೆ ಸಾರ್ವಜನಿಕ ಕುಂದು ಕೊರತೆಗಳ ಸಭೆ ಜರುಗಿಸಿ ಅಹವಾಲುಗಳನ್ನು ಸ್ವೀಕರಿಸಲಾಗುವುದು ಎಂದು ಕರ್ನಾಟಕ ಲೋಕಾಯುಕ್ತ ಪೊಲೀಸ್ ಅಧೀಕ್ಷಕ ಶಂಕರ ಎಂ.ರಾಗಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## 2023ನೇ ವರ್ಷದಲ್ಲಿ ಪ್ರಥಮ ಮುದ್ರಣವಾಗಿ ಪ್ರಕಟವಾದ ಪುಸ್ತಕಗಳ ಆಯ್ಕೆಗೆ ಅರ್ಜಿ ಆಹ್ವಾನ

ಧಾರವಾಡ: 2023ನೇ ವರ್ಷದಲ್ಲಿ ಪ್ರಥಮ ಮುದ್ರಣವಾಗಿ ಪ್ರಕಟವಾದ ಪುಸ್ತಕಗಳ ಆಯ್ಕೆಗಾಗಿ ಅರ್ಜಿಯನ್ನು ಆಹ್ವಾನಿಸಲಾಗಿದೆ. ಆಸಕ್ತಿವುಳ್ಳ ಸ್ಥಳೀಯ ಲೇಖಕರು, ಲೇಖಕ ಪ್ರಕಾಶಕರು, ಪ್ರಕಾಶಕರು, ಪ್ರಕಟಣಾ ಸಂಸ್ಥೆಗಳು ಧಾರವಾಡ ಜಿಲ್ಲಾಧಿಕಾರಿಗಳ ಕಛೇರಿ ಆವರಣದ ನಗರ ಕೇಂದ್ರ ಗ್ರಂಥಾಲಯ ಉಪ ನಿರ್ದೇಶಕರ ಕಛೇರಿಯಲ್ಲಿ ಅರ್ಜಿಯನ್ನು ಪಡೆದು ಅರ್ಜಿಯೊಂದಿಗೆ ಪುಸ್ತಕದ ಒಂದು ಪ್ರತಿಯನ್ನು ಮಾರ್ಚ್ 10,2024 ರ ಸಂಜೆ 5 ಗಂಟೆಯೊಳಗೆ ಸದರಿ ಕಚೇರಿಗೆ ಸಲ್ಲಿಸಬೇಕು.

ಹೆಚ್ಚಿನ ಮಾಹಿತಿಗಾಗಿ ಕಛೇರಿ ದೂರವಾಣಿ ಸಂಖ್ಯೆ: 0836-2441683/2442183 ಸಂಪರ್ಕಿಸಬಹುದು ಎಂದು ನಗರ ಕೇಂದ್ರ ಗ್ರಂಥಾಲಯ ಉಪನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ತಾತ್ಕಾಲಿಕ ಹುದ್ದೆಗೆ ಅರ್ಜಿ ಆಹ್ವಾನ

ಧಾರವಾಡ: ಜಿಲ್ಲೆಯ ಕೃಷಿ ವಿಶ್ವವಿದ್ಯಾಲಯ, ಸಮುದಾಯ ವಿಜ್ಞಾನ ಮಹಾವಿದ್ಯಾಲಯ, ಆಹಾರ ಸಂಸ್ಕರಣಾ ತಂತ್ರಜ್ಞಾನ ವಿಭಾಗ, ಬಿ.ಟೆಕ್. (ಫುಡ್ ಟೆಕ್) ವಿಭಾಗದಲ್ಲಿ ಸಹಾಯಕ ಪ್ರಾಧ್ಯಾಪಕರ ಒಂದು ತಾತ್ಕಾಲಿಕ ಹುದ್ದೆಗೆ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಆಸಕ್ತರು ಅರ್ಜಿ ನಮೂನೆಯ ಎರಡು ಪ್ರತಿಗಳೊಂದಿಗೆ ಫೆಬ್ರವರಿ 27, 2024 ರಂದು ಮುಂಜಾನೆ 11.00 ಘಂಟೆಗೆ ವಿದ್ಯಾಧಿಕಾರಿಗಳು (ಸವಿ), ಸಮುದಾಯ ವಿಜ್ಞಾನ ಮಹಾವಿದ್ಯಾಲಯದ ಕಚೇರಿಯಲ್ಲಿ ಸಂದರ್ಶನಕ್ಕೆ ಹಾಜರಾಗಬೇಕು.

ಹೆಚ್ಚಿನ ಮಾಹಿತಿಗಾಗಿ 0836-2214234 ಹಾಗೂ ಕೃವಿವಿ ಜಾಲತಾಣ www.uasd.edu ಗೆ ಸಂಪರ್ಕಿಸಬಹುದೆಂದು ಡೀನ್ (ಸವಿ), ಸಮುದಾಯ ವಿಜ್ಞಾನ ಮಹಾವಿದ್ಯಾಲಯ, ಕೃವಿವಿ, ಧಾರವಾಡ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಪುರುಷರಲ್ಲಿ ಈ ಲಕ್ಷಣಗಳು ಕ್ಯಾನ್ಸರ್ ರೋಗಕ್ಕೆ ಕಾರಣವಾಗಬಹುದು

ಪುರುಷರು ತಮ್ಮ ಆರೋಗ್ಯವನ್ನು ನಿರ್ಲಕ್ಷಿಸಬಾರದು. ನಿಮ್ಮ ದೇಹದಲ್ಲಿನ ಬದಲಾವಣೆಗಳಿಗೆ ಗಮನ ಕೊಡಿ ಎಂದು ಆರೋಗ್ಯ ತಜ್ಞರಾದ ಥೆರೆಸ್ ಬೆವರ್ಸ್ ಹೇಳುತ್ತಾರೆ.

ದೇಹದಲ್ಲಿ ನಡುಕ, ಮೈ ಕೈ ನೋವು, ಅಜೀರ್ಣ, ಆಗಾಗ ಮೂತ್ರ ವಿಸರ್ಜನೆ ಇಂತಹ ಲಕ್ಷಣಗಳು ನಿಮ್ಮಲ್ಲಿ ಕಂಡುಬಂದರೆ ನಿರ್ಲಕ್ಷಿಸದಿರಿ. ಇಂತಹ ಲಕ್ಷಣಗಳು ನಿಮಗೆ ಸಣ್ಣದೆಂದಿನಿಸಿದರೂ ಕೂಡ ನಿಮ್ಮ ಹತ್ತಿರದ ವೈದ್ಯರನ್ನು ಭೇಟಿ ನೀಡುವುದು ಅಗತ್ಯವಾಗಿದೆ. ಕ್ಯಾನ್ಸರ್ ಯಾವಾಗಲೂ ಒಂದೇ ರೀತಿಯ ರೋಗ ಲಕ್ಷಣಗಳನ್ನು ಹೊಂದಿರುವುದಿಲ್ಲ, ಬದಲಾಗಿ ಅಸ್ಪಷ್ಟವಾಗಿರುತ್ತವೆ. ಪುರುಷರು ತಮ್ಮ ಆರೋಗ್ಯವನ್ನು ನಿರ್ಲಕ್ಷಿಸಬಾರದು. ನಿಮ್ಮ ದೇಹದಲ್ಲಿನ ಬದಲಾವಣೆಗಳಿಗೆ ಗಮನ ಕೊಡಿ ಎಂದು ಆರೋಗ್ಯ ತಜ್ಞರಾದ ಥೆರೆಸ್ ಬೆವರ್ಸ್ ಹೇಳುತ್ತಾರೆ.



ಪುರುಷರಲ್ಲಿನ ಕೆಲವು ಸಾಮಾನ್ಯ ಕ್ಯಾನ್ಸರ್ ರೋಗಲಕ್ಷಣಗಳು:

ಅಸಹಜ ಗಡ್ಡೆ: ನಿಮ್ಮ ಚರ್ಮದ ಕೆಳಗೆ ದ್ರವ್ಯರಾಶಿ ಅಥವಾ ಗಡ್ಡೆ ಕಂಡು ಬಂದರೆ ನಿರ್ಲಕ್ಷಿಸದಿರಿ. ಸಾಮಾನ್ಯವಾಗಿ ಸ್ತನ, ವೃಷಣಗಳು, ದುಗ್ಧರಸ ಗ್ರಂಥಿಗಳು ಮತ್ತು ಸ್ನಾಯುರಜ್ಜುಗಳು ಮತ್ತು ಅಸ್ಥಿರಜ್ಜುಗಳಂತಹ ಮೃದು ಅಂಗಾಂಶಗಳಲ್ಲಿ ಕಾಣಿಸಿಕೊಳ್ಳುತ್ತವೆ.

ವೃಷಣಗಳಲ್ಲಿ ಬದಲಾವಣೆಗಳು: ನಿಮ್ಮ ವೃಷಣಗಳ ಗಾತ್ರದಲ್ಲಿನ ಬದಲಾವಣೆಗಳನ್ನು ನೀವು ಗಮನಿಸಿದ್ದೀರಾ ಅಥವಾ ನಿಮ್ಮ ವೃಷಣಗಳು ಊದಿಕೊಂಡಿವೆ ಎಂದು ನಿಮಗೆ ಅನಿಸಿದರೆ ವೈದ್ಯರನ್ನು ಭೇಟಿಯಾಗುವುದು ಅಗತ್ಯವಾಗಿದೆ. ವೃಷಣ ಕ್ಯಾನ್ಸರ್ ಯುವ ಮತ್ತು ಮಧ್ಯವಯಸ್ಕ ಪುರುಷರಲ್ಲಿ ಹೆಚ್ಚಾಗಿ ಕಂಡುಬರುತ್ತದೆ.

ಚರ್ಮದಲ್ಲಿ ಬದಲಾವಣೆಗಳು: ಅಸಾಮಾನ್ಯ ರಕ್ತಸ್ರಾವ, ವಾಸಿಯಾಗದ ಹುಣ್ಣುಗಳು ಅಥವಾ ಇತರ ಚಿಹ್ನೆಗಳು ನರಹುಲಿಗಳು ಮುಂತಾದ ಲಕ್ಷಣಗಳು ಕೂಡ ಪುರುಷರಲ್ಲಿ ಕ್ಯಾನ್ಸರ್‌ನ ಆರಂಭಿಕ ಚಿಹ್ನೆಗಳಾಗಿರಬಹುದು.

ಅಜೀರ್ಣ ಅಥವಾ ನುಂಗಲು ತೊಂದರೆ: ನಿಮ್ಮ ಗಂಟಲು ಅಥವಾ ಎದೆಯಲ್ಲಿ ದೀರ್ಘಕಾಲದ ನೋವಿನ ಸುಡುವ ಸಂವೇದನೆಯು ಕಂಡು ಬಂದರೆ ನಿರ್ಲಕ್ಷಿಸದಿರಿ. ನಿಯಮಿತ ಅಜೀರ್ಣ ಅಥವಾ ನುಂಗಲು ತೊಂದರೆ ವಯಸ್ಸಾದ ಸಾಮಾನ್ಯ ಭಾಗವಾಗಿದೆ ಎಂದು ಯೋಚಿಸಬೇಡಿ. ಇದು ಅನ್ನನಾಳ, ಹೊಟ್ಟೆ ಅಥವಾ ಗಂಟಲಿನ ಕ್ಯಾನ್ಸರ್‌ನ ಸಂಕೇತವಾಗಿರಬಹುದು.

ನಿರಂತರ ನೋವು: ಬೆನ್ನು ನೋವು, ತಲೆನೋವು, ಹೊಟ್ಟೆ ನೋವು ಮತ್ತು, ನಿರಂತರವಾದ ನೋವು, ಯಾವುದೇ ಸ್ಥಳದ ಹೊರತಾಗಿಯೂ, ಏನೋ ತಪ್ಪಾಗಿದೆ ಎಂಬುದರ ಮೊದಲ ಸಂಕೇತವಾಗಿರಬಹುದು.

ನಿಮ್ಮ ಬಾಯಿಯೊಳಗಡೆ ಬದಲಾವಣೆ: ನೀವು ಧೂಮಪಾನ ಮಾಡುತ್ತಿದ್ದರೆ, ನಿಮ್ಮ ಬಾಯಿಯೊಳಗಿನ ಬದಲಾವಣೆಗಳನ್ನು ನೀವು ಸೂಕ್ಷ್ಮವಾಗಿ ಗಮನಿಸಬೇಕು. ನಿಮ್ಮ ಬಾಯಿಯೊಳಗಿನ ಬಿಳಿ ತೇಪೆಗಳು ಅಥವಾ ನಿಮ್ಮ ನಾಲಿಗೆಯ ಮೇಲಿನ ಬಿಳಿ ತೇಪೆಗಳು ಕ್ಯಾನ್ಸರ್ ಪ್ರಾರಂಭಿಕ ಹಂತವಾಗಿರಬಹುದು. ನಿಮ್ಮ ಬಾಯಿಯ ಸುತ್ತಲಿನ ಪ್ರದೇಶದಲ್ಲಿ ಹುಣ್ಣುಗಳು, ರಕ್ತಸ್ರಾವ, ಮರಗಟ್ಟುವಿಕೆ ಅಥವಾ ಮೃದುತ್ವ ಕಂಡು ಬಂದರೆ ವೈದ್ಯರನ್ನು ಸಂಪರ್ಕಿಸುವುದು ಅಗತ್ಯವಾಗಿದೆ.

## ಜೀರಿಗೆ ನೀರಿನಲ್ಲಿದೆ ಈ ಆರೋಗ್ಯ ಲಾಭ




ಎಲ್ಲಾ ರೀತಿಯ ರೋಗಗಳಿಗೂ ವೈದ್ಯರ ಬಳಿ ಓಡಬೇಕಿಲ್ಲ. ಕೆಲವೊಂದಕ್ಕೆ ಮನೆಯಲ್ಲೇ ಮದ್ದು ಮಾಡಿಕೊಳ್ಳಬಹುದು. ಗ್ಯಾಸ್ಟ್ರಿಕ್, ಅಜೀರ್ಣ, ಮಲಬದ್ಧತೆ, ಬಾಯಿ ಹುಣ್ಣು, ಪಿತ್ತ ಸಂಬಂಧಿ ತಲೆನೋವು, ವಾಂತಿ- ಇದಕ್ಕೆಲ್ಲಾ ಮನೆಮದ್ದನ್ನೇ ಪ್ರಯತ್ನಿಸಬಹುದು.

ಮನೆಯಲ್ಲಿ ಜೀರಿಗೆ ಇದ್ದರೆ ಸಾಕು. ಬಿಸಿಬಿಸಿ ನೀರಿಗೆ ಜೀರಿಗೆ ಹಾಕಿ, ಅದನ್ನು ಕುದಿಸಿ ಕುಡಿದರೆ ಹೊಟ್ಟೆಗೆ ಸಂಬಂಧಪಟ್ಟ ಸಮಸ್ಯೆಗಳು ಶಮನವಾಗುತ್ತವೆ. ಜೀರ್ಣಕ್ರಿಯೆ ವೇಗವಾಗಿ ಆಗುತ್ತದೆ. ಆಗ ಯಾವ ಕಾಯಿಲೆಗಳೂ ಬರುವುದಿಲ್ಲ. ಜೀರಿಗೆಗೆ ರಕ್ತ ಶುದ್ಧಿ ಮಾಡುವ ಶಕ್ತಿ ಇದೆ. ಬಾಯಿ ರುಚಿ ಕಳೆದುಕೊಂಡರೆ ಜೀರಿಗೆ ಕಷಾಯ ಮಾಡಿ, ಅದಕ್ಕೆ ಬೆಲ್ಲ ಬೆರೆಸಿ ಕುಡಿದು ನೋಡಿ. ಒಳಗಿರುವ ಜ್ವರ, ಅದರ ಲಕ್ಷಣಗಳ ಮೂಲ ಬೇರನ್ನು ಅಲ್ಲೇ ಚಿವುಟಿ ಹಾಕುತ್ತದೆ.

ತಲೆನೋವು, ಸ್ವಲ್ಪ ಮೈ ಕೈ ನೋವಿದ್ದರೆ ಐದು ಗ್ಲಾಸ್ ನೀರಿಗೆ 6-8 ಚಮಚ ಜೀರಿಗೆ ಪುಡಿ ಹಾಕಿ, ಮೂರು ಚಮಚ ಮೆಣಸಿನ ಕಾಳು ಕುಟ್ಟಿ ಹಾಕಿ. ಒಣ ಶುಂಠಿ, ರುಚಿಗೆ ತಕ್ಕಷ್ಟು ಬೆಲ್ಲ ಸೇರಿಸಿ ಚೆನ್ನಾಗಿ ಕುದಿಸಿ. ದಿನಕ್ಕೆ ಮೂರು ಬಾರಿ ಕುಡಿದರೆ ತಲೆನೋವಿನ ಜೊತೆಗೆ ಜ್ವರ ಕೂಡ ನಿವಾರಣೆಯಾಗುತ್ತದೆ.

## ಜ್ಞಾಪಕ ಶಕ್ತಿ ಹೆಚ್ಚು ಮಾಡುವ 5 ಯೋಗಾಸನಗಳಿವು



ಜ್ಞಾಪಕ ಶಕ್ತಿ ಎಂಬುವುದು ಎಲ್ಲಾ ವಯಸ್ಸಿನವರಿಗೂ ಅವಶ್ಯಕ. ಜ್ಞಾಪಕ ಶಕ್ತಿಕಡಿಮೆಯಾದರೆ ಮರೆವಿನ ಸಮಸ್ಯೆ ಉಂಟಾಗುವುದು. ಮರೆವಿನ ಸಮಸ್ಯೆ ಉಂಟಾದರೆ ಮಕ್ಕಳಿಂದ ಹಿಡಿದು ದೊಡ್ಡವರವರೆಗೆ ತುಂಬಾನೇ ದೊಡ್ಡ ಸಮಸ್ಯೆ ಉಂಟಾಗುವುದು. ಅದರಲ್ಲೂ ವಯಸ್ಸಾಗುತ್ತಿದ್ದಂತೆ ಮರೆವು ಸಮಸ್ಯೆ ಹೆಚ್ಚಿನವರಲ್ಲಿ ಕಂಡು ಬರುತ್ತದೆ.

ಅಲ್ಜೈಮರ್ಸ್‌ನಂಥ ಸಮಸ್ಯೆ ಉಂಟಾಗುವುದು. ಮಕ್ಕಳಿಗೆ ಓದಿದ್ದು ನೆನಪಿನಲ್ಲಿದ್ದು ಪರೀಕ್ಷೆಯಲ್ಲಿ ಅತೀ ಹೆಚ್ಚು ಅಂಕ ಗಳಿಸಬೇಕು, ದೊಡ್ಡವರಿಗೆ ಮರೆವಿನ ಸಮಸ್ಯೆ ಉಂಟಾಗಬಾರದೆಂದರೆ ಈ 5 ಯೋಗಾಸನ ಪ್ರತಿನಿತ್ಯ ಅಭ್ಯಾಸ ಮಾಡಿ, ಮರೆವು ಎಂಬುವುದು ನಿಮ್ಮ ಸಮೀಪ ಬರಲು ಮರೆತು ಹೋಗುವುದು.

1. ವೃಕ್ಷಾಸನ ಋಷಿ ಮುನಿಗಳು ಒಂಟಿಕಾಲಿನಲ್ಲಿ ನಿಂತು ತಪಸ್ಸು ಮಾಡುತ್ತಿದ್ದರು ಎಂದು ಪೌರಾಣಿಕ ಕತೆಯಲ್ಲಿ ಓದಿರುತ್ತೀರಿ. ಈ ವೃಕ್ಷಾಸನ ದೇಹವನ್ನು ಬ್ಯಾಲೆನ್ಸ್ ಮಾಡಲು ಸಹಾಯ ಮಾಡುವುದು ಜೊತೆಗೆ ಏಕಾಗ್ರತೆ ಹೆಚ್ಚಿಸುವುದು. ಮಕ್ಕಳು ಈ ಆಸನ ಪ್ರತಿನಿತ್ಯ ಅಭ್ಯಾಸ ಮಾಡುವುದರಿಂದ ಕಲಿಕೆಯಲ್ಲಿ ಮತ್ತಷ್ಟು ಪ್ರವೀಣರಾಗುತ್ತಾರೆ. ವೃಕ್ಷಾಸನ ಮಾಡುವಾಗ ನಿಮ್ಮ ಬೆನ್ನು ನೇರವಾಗಿರಲಿ.

2. ಪಶ್ಚಿಮೋತ್ತಾಸನ ನೀವು ಮೊದಲು ದಂಡಾಸನ ಮಾಡಿ ನಂತರ ಪಶ್ಚಿಮೋತ್ತಾಸನ ಮಾಡಿ. ಉಸಿರನ್ನು ನಿಧಾನಕ್ಕೆ ತೆಗೆದು ನಿಧಾನಕ್ಕೆ ಬಿಡುತ್ತಾ ಮುಂದೆಕ್ಕೆ ಬಾಗಿ ನಿಮ್ಮ ಕಾಲಿನ ಬೆರಳನ್ನು ಮುಟ್ಟಿ. ಈ ರೀತಿ ಮಾಡುವುದರಿಂದ ನೆನಪಿನ ಶಕ್ತಿ ಹೆಚ್ಚುವುದು.

3. ಬಕಾಸನ ಈ ಯೋಗಾಸನ ಮಾಡಲು ತುಂಬಾ ಪ್ರಾಕ್ಟೀಸ್ ಬೇಕು, ಹದ್ದಿನ ರೀತಿಯಲ್ಲಿ ದೇಹವನ್ನು ಮಾಡುವುದು. ಕೈಗಳು ಮಾತ್ರ ನೆಲದ ಮೇಲೆ ಒತ್ತಿ ಹಿಡಿದು ಇಡೀ ದೇಹವನ್ನು ಮೇಲಕ್ಕೆ ಎತ್ತಿ 30 ಸೆಕೆಂಡ್ ಇಲ್ಲಿ. ಈ ಆಸನ ಕೂಡ ನೆನಪಿನ ಶಕ್ತಿ ಹೆಚ್ಚಿಸುವುದು.

4. ಸರ್ವಾಂಗಾಸನ ಸರ್ವಾಂಗಾಸನ ಮಾಡುವುದರಿಂದ ತುಂಬಾ ಪ್ರಯೋಜನಗಳಿವೆ, ಸರ್ವಾಂಗಾಸನ ಮಾಡಿದಾಗ ತಲೆಯಲ್ಲಿ ರಕ್ತ ಸಂಚಾರವಾಗುವುದು, ಇದರಿಂದ ಮೆದುಳು ಚುರುಕಾಗಿ ನೆನಪಿನ ಶಕ್ತಿ ಹೆಚ್ಚಾಗುವುದು.'

5. ಶಿರ್ಸಾಸನ ಶಿರ್ಸಾಸನ ಮಾಡಲು ಕೂಡ ತುಂಬಾ ಅಭ್ಯಾಸ ಬೇಕು. ಆದ್ದರಿಂದ ಈ ಆಸನ ನೀವೇ ಸ್ವಂತ ಮಾಡಬೇಡಿ, ಪರಿಣಿತರ ಸಲಹೆ ಪಡೆದ ಬಳಿಕ ಮಾಡಿ. ಶಿರ್ಸಾಸನದಿಂದ ಕೂಡ ಜ್ಞಾಪಕ ಶಕ್ತಿ ಹೆಚ್ಚಾಗುವುದು.

## ಕೋಳಿ, ಹಂದಿ, ದನದ ಮಾಂಸದಲ್ಲಿ ಹೊಸ ಬಗೆಯ ಆಂಟಿ ಆಕ್ಸಿಡೆಂಟ್‌ಗಳು ಪತ್ತೆ

ಟೋಕಿಯೊ: ಕೋಳಿ, ಹಂದಿ ಹಾಗೂ ದನದ ಮಾಂಸದಲ್ಲಿ ಹೊಸ ಬಗೆಯ ಆಂಟಿಆಕ್ಸಿಡೆಂಟ್‌ಗಳನ್ನು (ಉತ್ಕರ್ಷಣಗಳು) ಜಪಾನ್ ಸಂಶೋಧಕರು ಪತ್ತೆ ಹಚ್ಚಿದ್ದಾರೆ. ಈ ಹೊಸ ಬಗೆಯ ಆಂಟಿಆಕ್ಸಿಡೆಂಟ್‌ಗಳು ಮನುಷ್ಯನ ಆಯಾಸವನ್ನು ಕಡಿಮೆ ಮಾಡಲು ಹಾಗೂ ಬುದ್ಧಿಮಾಂದ್ಯತೆ ತಡೆಗಟ್ಟಲು ಸಹಾಯ ಮಾಡುತ್ತವೆ ಎಂದು ಕಂಡುಕೊಳ್ಳಲಾಗಿದೆ.

ಜಪಾನ್‌ನ ಒಸಾಕಾ ಮೆಟ್ರೋಪಾಲಿಟನ್ ವಿಶ್ವವಿದ್ಯಾನಿಲಯದ ಪ್ರೊ. ಹಿದೇಶಿ ಇಹಾರಾ ನೇತೃತ್ವದ ಸಂಶೋಧನಾ ತಂಡವು ಈ ಅಂಶವನ್ನು ಪತ್ತೆ ಹಚ್ಚಿದ್ದಾರೆ. ಸಾಮಾನ್ಯವಾಗಿ ಮಾಂಸ ಮತ್ತು ಮೀನುಗಳಲ್ಲಿ ಆಯಾಸ ನಿಯಂತ್ರಿಸುವ ಆಕ್ಸೋ-ಐಡಿಪಿಗಳು (ಆಂಟಿಆಕ್ಸಿಡೆಂಟ್‌ಗಳು) ಹೇರಳವಾಗಿರುತ್ತವೆ. ಈಗ ಕಂಡುಕೊಂಡಿರುವ ಸಂಶೋಧನೆಗಳಲ್ಲಿ ಕೋಳಿ, ದನ ಹಾಗೂ ಹಂದಿ ಮಾಂಸದಲ್ಲಿ 2-ಆಕ್ಸೋ-ಐಡಿಪಿಗಳು ಪತ್ತೆಯಾಗಿವೆ.

ಇದು ಸಾಮಾನ್ಯ ಐಡಿಪಿಗಳಿಗಿಂತ ಹೆಚ್ಚು ಆಮ್ಲಜನಕದ ಪ್ರಮಾಣವನ್ನು ಹೊಂದಿದೆ ಎಂದು ತಿಳಿದು ಬಂದಿದೆ. ಹೊಸ ಸಂಶೋಧನೆ ಕಂಡುಕೊಂಡಿರುವ ಸಂಗತಿ ಪ್ರಕಾರ ಔಷಧ ವಿಜ್ಞಾನ ಹಾಗೂ ಕೃಷಿ ಕ್ಷೇತ್ರದಲ್ಲಿನ ರಾಸಾಯನಿಕ ವಿಭಾಗದ ಬೆಳವಣಿಗೆಗೆ ಸಹಾಯಕವಾಗಬಹುದು ಎಂದು ಪ್ರೊಫೆಸರ್ ಹಿದೇಶಿ ಇಹಾರಾ ಅಭಿಪ್ರಾಯಪಟ್ಟಿದ್ದಾರೆ.

## ತೂಕ ನಷ್ಟಕ್ಕೆ ಈ ಸೊಪ್ಪಿನ ಆಮ್ಲೇಟ್ ಸಹಕಾರಿ: ಮಂಜಿನಂತೆ ಕರಗುವುದು ಬೊಜ್ಜು!

ಮೊಟ್ಟೆಯು ಪ್ರೋಟೀನ್ ಸಮೃದ್ಧವಾಗಿರುವ ಆಹಾರವಾಗಿದ್ದು, ಜನರು ಬೆಳಗಿನ ಉಪಾಹಾರದಿಂದ ಮಧ್ಯಾಹ್ನದ ಊಟದವರೆಗೆ ಬಹಳ ಉತ್ಸಾಹದಿಂದ ತಿನ್ನಲು ಇಷ್ಟಪಡುತ್ತಾರೆ. ಇನ್ನೊಂದೆಡೆ ಪಾಲಕ್ ಸೊಪ್ಪು ಸಹ ಉತ್ತಮ ಪ್ರಮಾಣದ ಫೈಬರ್ ಅನ್ನು ಹೊಂದಿರುತ್ತದೆ.

ಅದಕ್ಕಾಗಿಯೇ ಜನರು ಪಾಲಕ್ ನಿಂದ ಅನೇಕ ಭಕ್ಷ್ಯಗಳನ್ನು ತಯಾರಿಸಿ ತಿನ್ನುತ್ತಾರೆ. ಆದರೆ ನೀವು ಎಂದಾದರೂ ಮೊಟ್ಟೆ ಮತ್ತು ಪಾಲಕ್ ಸಂಯೋಜನೆಯಲ್ಲಿ ಮಾಡಿದ ಪಾಲಕ್ ಆಮ್ಲೆಟ್ ಅನ್ನು ಸೇವಿಸಿದ್ದೀರಾ? ಇಲ್ಲದಿದ್ದರೆ, ಇಂದು ನಾವು ನಿಮಗಾಗಿ ಪಾಲಕ್ ಆಮ್ಲೆಟ್ ಮಾಡುವ ಪಾಕವಿಧಾನವನ್ನು ಹೇಳಲಿದ್ದೇವೆ.

ಈ ಆರೋಗ್ಯ ಸಮಸ್ಯೆಗಳಿರುವವರಿಗೆ ಮೊಟ್ಟೆ ಸೇವನೆ ತುಂಬಾ ಡೇಂಜರ್ ಪಾಲಕ್ ಆಮ್ಲೆಟ್ ರುಚಿ ಮತ್ತು ಪೌಷ್ಟಿಕಾಂಶದಿಂದ ತುಂಬಿದೆ. ತೂಕ ನಷ್ಟದ ಸಮಯದಲ್ಲಿ ನೀವು ಇದನ್ನು ಆಹಾರದಲ್ಲಿ ಸೇರಿಸಿಕೊಳ್ಳಬಹುದು. ಇದನ್ನು ಮಾಡುವುದು ಕೂಡ ತುಂಬಾ ಸರಳವಾಗಿದೆ. ಹಾಗಾದರೆ ಪಾಲಕ್ ಆಮ್ಲೆಟ್ ಮಾಡುವುದು ಹೇಗೆ ಎಂದು ತಿಳಿಯೋಣ.

ಪಾಲಕ್ ಆಮ್ಲೆಟ್ ಮಾಡಲು ಬೇಕಾಗುವ ಸಾಮಾಗ್ರಿಗಳು: 3 ಮೊಟ್ಟೆ, 1 ಈರುಳ್ಳಿ, 1/4 ಟೀ ಸ್ಪೂನ್ ಕತ್ತರಿಸಿದ ಶುಂಠಿ, 1/4 ಟೀ ಸ್ಪೂನ್ ಕತ್ತರಿಸಿದ ಬೆಳ್ಳುಳ್ಳಿ, 4 ಟೀ ಸ್ಪೂನ್ ಪಾಲಕ (ಸಣ್ಣದಾಗಿ ಕೊಚ್ಚಿದ), 1 ಹಸಿರು ಮೆಣಸಿನಕಾಯಿ, 1/4 ಟೀ ಸ್ಪೂನ್ ಕೆಂಪು ಮೆಣಸಿನ ಪುಡಿ, ಚಿಟಿಕೆ ಅರಿಶಿನ, 1/2 ಟೀ ಸ್ಪೂನ್ ಗರಂ ಮಸಾಲಾ, 2 ಟೀ ಸ್ಪೂನ್ ಎಣ್ಣೆ, ರುಚಿಗೆ ಉಪ್ಪು,

ಪಾಲಕ್ ಆಮ್ಲೆಟ್ ಮಾಡುವ ವಿಧಾನ: ಪಾಲಕ್ ಆಮ್ಲೆಟ್ ಮಾಡಲು, ಮೊದಲು ಪಾಲಕ್ ನ್ನು ಚೆನ್ನಾಗಿ ತೊಳೆದು ನುಣ್ಣಗೆ ಕತ್ತರಿಸಿ. ನಂತರ ಈರುಳ್ಳಿ, ಹಸಿರು ಮೆಣಸಿನಕಾಯಿ, ಶುಂಠಿ ಮತ್ತು ಬೆಳ್ಳುಳ್ಳಿಯನ್ನು ತೊಳೆದು ಸಣ್ಣದಾಗಿ ಹಚ್ಚಿರಿ. ಇದಾದ ನಂತರ ನಾನ್ ಸ್ಟಿಕ್ ಪ್ಯಾನ್ ನಲ್ಲಿ ಎಣ್ಣೆ ಹಾಕಿ ಮಧ್ಯಮ ಉರಿಯಲ್ಲಿ ಬಿಸಿ ಮಾಡಿ. ಅದಕ್ಕೆ ಸಣ್ಣಗೆ ಹೆಚ್ಚಿದ ಈರುಳ್ಳಿ, ಶುಂಠಿ, ಹಸಿಮೆಣಸಿನಕಾಯಿ, ಹಸಿರು ಕೊತ್ತಂಬರಿ ಸೊಪ್ಪು ಮತ್ತು ಬೆಳ್ಳುಳ್ಳಿ ಸೇರಿಸಿ. ಇದರ ನಂತರ, ಈ ಎಲ್ಲಾ ವಸ್ತುಗಳನ್ನು ಸುಮಾರು 1 ನಿಮಿಷ ಫ್ರೈ ಮಾಡಿ.



ನಂತರ ಸಣ್ಣದಾಗಿ ಕೊಚ್ಚಿದ ಪಾಲಕ್ ಸೊಪ್ಪನ್ನು ಬಾಣಲೆಯಲ್ಲಿ ಹಾಕಿ ಚಮಚದ ಸಹಾಯದಿಂದ ಹರಡಿ. ಇದರ ನಂತರ, ಸುಮಾರು 2 ನಿಮಿಷಗಳ ಕಾಲ ಪಾಲಕ್ ಸೊಪ್ಪನ್ನು ಬೇಯಿಸಿ. ನೀವು ರುಚಿಗೆ ತಕ್ಕಂತೆ ಅರಿಶಿನ, ಕೆಂಪು ಮೆಣಸಿನ ಪುಡಿ, ಗರಂ ಮಸಾಲಾ ಮತ್ತು ಉಪ್ಪನ್ನು ಸೇರಿಸಿ. ಸ್ವಲ್ಪ ಹೊತ್ತು ಹುರಿದ ನಂತರ ಮೊಟ್ಟೆಯನ್ನು ಒಡೆದು ಚೆನ್ನಾಗಿ ಬೀಟ್ ಮಾಡಿ. ನಂತರ ಬಾಣಲೆಯಲ್ಲಿ ಒಂದು ಚಮಚ ಎಣ್ಣೆಯನ್ನು ಹಾಕಿ ಬಿಸಿ ಮಾಡಿ.

ಮೇಲಿನಿಂದ ಹೊಡೆದ ಮೊಟ್ಟೆಯನ್ನು ಸೇರಿಸಿ ಮತ್ತು ಸ್ವಲ್ಪ ಬೇಯಿಸಿ. ನಂತರ ಅದನ್ನು ತಿರುಗಿಸಿ ಮತ್ತು ಇನ್ನೊಂದು ಬದಿಯಿಂದ ಸುಮಾರು 2-3 ನಿಮಿಷ ಬೇಯಿಸಿ. ಈಗ ಟೇಸ್ಟಿ ಮತ್ತು ಪೌಷ್ಟಿಕಾಂಶದ ಪಾಲಕ್ ಆಮ್ಲೆಟ್ ಉಪಹಾರಕ್ಕೆ ಸಿದ್ಧವಾಗಿದೆ. ಮೂತ್ರಪಿಂಡಗಳಿಂದ ವಿಷಕಾರಿ ಪದಾರ್ಥಗಳನ್ನು ಹರಹಾಕಬೇಕೆ? ಇಲ್ಲಿದೆ ಒಂದು ಅದ್ಭುತ ಪಾನೀಯ!

ಸೂಚನೆ: ಇಲ್ಲಿ ನೀಡಲಾದ ಮಾಹಿತಿಯು ಮನೆಮದ್ದುಗಳು ಮತ್ತು ಸಾಮಾನ್ಯ ಮಾಹಿತಿಯನ್ನು ಆಧರಿಸಿದೆ. ಅದನ್ನು ಅಳವಡಿಸಿಕೊಳ್ಳುವ ಮೊದಲು ವೈದ್ಯಕೀಯ ಸಲಹೆಯನ್ನು ತೆಗೆದುಕೊಳ್ಳಬೇಕು.

## ಸಂಜೆ ವೇಳೆ ಹೆಚ್ಚು ಹಸಿವಾದ್ರೆ ಈ ಆರೋಗ್ಯಕರ ಆಹಾರ ಸೇವಿಸಿರಿ

ನವದೆಹಲಿ: ಮನೆ ಅಥವಾ ಕಚೇರಿಯಲ್ಲಿ ಸಂಜೆ-ಯಾದ ತಕ್ಷಣ ಜನರು ರುಚಿಕರವಾದ ತಿಂಡಿ ತಿನ್ನಲು ಹಂಬಲಿಸುತ್ತಾರೆ. ಈ ವೇಳೆ ಹೆಚ್ಚಾಗಿ ಕರಿದ ಆಹಾರವನ್ನು ಸೇವಿಸುತ್ತಾರೆ. ಇದರಿಂದ ಬೊಜ್ಜು, ಅಜೀರ್ಣ ಮತ್ತು ಇತರ ಕಾಯಿಲೆಗಳ ಅಪಾಯ ಉಂಟಾಗುತ್ತದೆ.

ಹೀಗಾಗಿಯೇ ನೀವು ಸಂಜೆಯ ತಿಂಡಿಗಳಲ್ಲಿ ಆರೋಗ್ಯಕರ ಆಹಾರ ಸೇರಿಸುವುದು ಮುಖ್ಯ. ಇದು ಆರೋಗ್ಯಕ್ಕೆ ಪ್ರಯೋಜನಕಾರಿ ಮತ್ತು ತಿನ್ನಲು ರುಚಿಕರವಾಗಿರುತ್ತದೆ. ಹಾಗಾದರೆ ಆರೋಗ್ಯಕರ ತಿಂಡಿಗಳ ಬಗ್ಗೆ ತಿಳಿಯಿರಿ.

1. ಮಖಾನಾ: ಮಖಾನಾ ಒಣ ಹಣ್ಣುಗಳಲ್ಲಿರುವ ಪೋಷಕಾಂಶಗಳ ನಿಧಿ. ಇದು ಕ್ಯಾಲ್ಸಿಯಂ, ಪ್ರೋಟೀನ್, ಮೆಗ್ನೀಸಿಯಮ್ ಮತ್ತು ಇತರ ಅಂಶಗಳಲ್ಲಿ ಸಮೃದ್ಧವಾಗಿದೆ. ಇದು ಗ್ಲುಟನ್ ಮುಕ್ತವೂ ಆಗಿದೆ.

ನೀವು ಇದನ್ನು ಸಂಜೆ ಉಪಾಹಾರದಲ್ಲಿ ಸೇರಿಸಬಹುದು. ಹುರಿದ ಮಖಾನವನ್ನು ಸೇವಿಸುವುದರಿಂದ ಆರೋಗ್ಯ-ಕ್ಕೆ ಯಾವುದೇ ಹಾನಿಯಾಗುವುದಿಲ್ಲ, ಬದಲಿಗೆ ಇದು ಆರೋಗ್ಯಕ್ಕೆ ಪ್ರಯೋಜನಕಾರಿಯಾಗಿದೆ.

2. ರಾಗಿ ಕುಕೀಸ್: ರಾಗಿಯು ಪೋಷಕಾಂಶಗಳ ಖಜಾನೆಯಾಗಿದೆ. ಇದು ಕ್ಯಾಲ್ಸಿಯಂ, ಪ್ರೋಟೀನ್, ಕಬ್ಬಿಣ, ಪೊಟ್ಯಾಸಿಯಮ್ ಮತ್ತು ಆಹಾರದ ಫೈಬರ್ಗಳಲ್ಲಿ ಸಮೃದ್ಧವಾಗಿದೆ. ಸಂಜೆಯ ತಿಂಡಿಯಲ್ಲಿ ನೀವು ರಾಗಿಯಿಂದ ಮಾಡಿದ ಕುಕೀಗಳನ್ನು ಸೇವಿಸಬಹುದು. ಇವು ಕೂಡ ತುಂಬಾ ರುಚಿಕರವಾಗಿವೆ. ಈ ಆರೋಗ್ಯ ಸಮಸ್ಯೆಗಳಿರುವವರಿಗೆ ಮೊಟ್ಟೆ ಸೇವನೆ ತುಂಬಾ ಡೇಂಜರ್

3. ಪಫ್ಡ್ ರೈಸ್: ಸಂಜೆಯ ತಿಂಡಿಗೆ ಪಫ್ಡ್ ರೈಸ್ ಅತ್ಯುತ್ತಮ ಆಯ್ಕೆಯಾಗಿದೆ. ಹಿರಿಯರಿಂದ ಹಿಡಿದು ಚಿಕ್ಕವರವರೆಗೆ ಎಲ್ಲರೂ ಇದನ್ನು ಇಷ್ಟಪಟ್ಟು ತಿನ್ನುತ್ತಾರೆ. ಇದರಿಂದ ಬೇಲ್ಪುರಿ, ಚಿಕ್ಕಿ ಇತ್ಯಾದಿ ಹಲವು ಬಗೆಯ ತಿಂಡಿಗಳನ್ನು ಮಾಡಬಹುದು. ಇದರಲ್ಲಿ ರುಚಿಯ ಜೊತೆಗೆ ಆರೋಗ್ಯವೂ ತುಂಬಿರುತ್ತದೆ.

4. ಡ್ರೈ ಫ್ರೂಟ್ಸ್ ತಿನ್ನಿ: ಸಂಜೆಯ ಕಡುಬಯಕೆ ಕಡಿಮೆ ಮಾಡಲು ಡ್ರೈ ಫ್ರೂಟ್ಸ್ ಸಹ ಸೇವಿಸಬಹುದು. ನಿಮ್ಮ ಹಸಿವನ್ನು ನೀಗಿಸಲು ಇದು ಉತ್ತಮ ಆಯ್ಕೆಯಾಗಿದೆ. ಬೇಕಿದ್ದರೆ ಸಂಜೆಯ ತಿಂಡಿಯಲ್ಲಿ ಬಾದಾಮಿ, ಗೋಡಂಬಿ, ಪಿಸ್ತಾ ಮುಂತಾದವುಗಳನ್ನು ಆಯ್ಕೆ ಮಾಡಿಕೊಳ್ಳಬಹುದು.

ದಿನಕ್ಕೆ ಎಷ್ಟು ಕಪ್ ಚಹಾ ಕುಡಿಯಬೇಕು ಗೊತ್ತಾ..? (ಗಮನಿಸಿರಿ: ಇಲ್ಲಿ ನೀಡಲಾದ ಮಾಹಿತಿ ಮನೆಮದ್ದುಗಳು ಮತ್ತು ಸಾಮಾನ್ಯ ಮಾಹಿತಿಯನ್ನು ಆಧರಿಸಿದೆ. ಇದನ್ನು ಅಳವಡಿಸಿಕೊಳ್ಳುವ ಮೊದಲು ವೈದ್ಯಕೀಯ ಸಲಹೆ ತೆಗೆದುಕೊಳ್ಳಬೇಕು.

## ಮನೆಯಲ್ಲಿ ಜಿರಳೆ ಕಾಟವೇ? ಹಾಗಿದ್ರೆ, ಈ ಸುಲಭ ವಿಧಾನದ ಮೂಲಕ ಓಡಿಸಿ!

ಅಡುಗೆಮನೆಯು ಮನೆಯ ಪ್ರಮುಖ ಭಾಗವಾಗಿದೆ. ಇದು ಯಾವಾಗಲೂ ಸ್ವಚ್ಛವಾಗಿ ಮತ್ತು ಅಚ್ಚುಕಟ್ಟಾಗಿ ಇಡಬೇಕಾಗುತ್ತದೆ. ಪ್ರತಿನಿತ್ಯ ಸ್ವಚ್ಛಗೊಳಿಸಿದ ನಂತರವೂ ಮನೆಯ ಕೆಲವೆಡೆ ಜಿರಳೆಗಳ ಕಾಟ ಹೆಚ್ಚಾಗುತ್ತಲೇ ಇರುತ್ತವೆ..

ಇವುಗಳನ್ನು ಓಡಿಸಲು ಜನ ಏನೆಲ್ಲಾ ಪ್ರಯತ್ನಗಳನ್ನು ಮಾಡುತ್ತಾರೆ. ಆದರೆ, ಅದಕ್ಕೆ ಯಾವುದುಈ ಪ್ರಯೋಜನವಾಗುದಿಲ್ಲ. ಇವುಗಳಿಂದ ರೋಗಗಳು ಬೇಗ ಹರಡುತ್ತವೆ. ನೀವು ಸಹ ಈ ಜಿರಳೆಗಳ ಕಾಟ ಅನುಭವಿಸುತ್ತಿದ್ದರೆ, ಈ ಸುಲಭ ಮನೆಮದ್ದುಗಳನ್ನು ಬಳಸಿಕೊಂಡು ಅವುಗಳನ್ನು ಓಡಿಸಬಹುದು.

ಜಿರಳೆಳಿಂದ ಹರಡುತ್ತವೆ ರೋಗಗಳ ಜಿರಳೆಗಳಿಂದ ಜನರು ರೋಗಗಳಿಗೆ ತುತ್ತಾಗುವ ಅಪಾಯವಿದೆ ಎಂದು ನಂಬಲಾಗಿದೆ. ನೀವು ಮನೆ ಮತ್ತು ಅಡುಗೆಮನೆಯಲ್ಲಿ ಇರುವ ಜಿರಳೆಗಳನ್ನು ತೊಡೆದುಹಾಕಲು ಬಯಸಿದರೆ. ಈ ಕೆಲಸ ಮಾಡಿ..

1. ಲವಂಗ ಮತ್ತು ಬೇವಿನ ಪರಿಹಾರ: ಲವಂಗದ ವಾಸನೆಯಿಂದ ಜಿರಳೆಗಳು ಓಡಿಹೋಗುತ್ತವೆ. ಇದಕ್ಕಾಗಿ, ಸುಮಾರು 20 ರಿಂದ 25 ಲವಂಗವನ್ನು ಪುಡಿಮಾಡಿ. ಈಗ ಅದಕ್ಕೆ ಕೆಲವು ಹನಿ ಬೇವಿನ ಎಣ್ಣೆಯನ್ನು ಸೇರಿಸಿ ಮತ್ತು ಜಿರಳೆಗಳು ಅಡಗಿರುವ ಸ್ಥಳಗಳಲ್ಲಿ ಸಿಂಪಡಿಸಿ. ವಾಸ್ತವವಾಗಿ ಜಿರಳೆಗಳು ಲವಂಗ ಮತ್ತು ಬೇವಿನ ವಾಸನೆಯನ್ನು ಇಷ್ಟಪಡುವುದಿಲ್ಲ.

ಅದೇ ಸಮಯದಲ್ಲಿ, ನೀವು ಸಂಪೂರ್ಣ ಲವಂಗವನ್ನು ಬೇವಿನ ಎಣ್ಣೆಯಲ್ಲಿ ಸಿಂಪಡಿಸಬಹುದು ಮತ್ತು ಜಿರಳೆಗಳು ಪ್ರತಿದಿನ ಬರುವ ಮತ್ತು ಹೋಗುವ ಸ್ಥಳಗಳಲ್ಲಿ ಅವುಗಳನ್ನು ಹರಡಬಹುದು. ಇದರೊಂದಿಗೆ, ಲವಂಗದ ವಾಸನೆ ಮುಗಿದಿದೆ ಎಂದು ನೀವು ಭಾವಿಸಿದ ತಕ್ಷಣ,



ಹಳೆಯ ಲವಂಗವನ್ನು ತೆಗೆದುಹಾಕಿ ಮತ್ತು ಹೊಸ ಲವಂಗವನ್ನು ಹಾಕಬೇಕು ಎಂಬುದನ್ನು ಸಹ ನೀವು ನೆನಪಿನಲ್ಲಿಡಬೇಕು.

2. ಪುದೀನಾ ಎಣ್ಣೆ ಮತ್ತು ಉಪ್ಪಿನ ಪರಿಹಾರ: ಜಿರಳೆಗಳನ್ನು ಮನೆಯಿಂದ ತೊಡೆದುಹಾಕಲು ನೀವು ಇನ್ನೊಂದು ಪರಿಣಾಮಕಾರಿ ಮಾರ್ಗದ ಬಗ್ಗೆ ಮಾತನಾಡಿದರೆ, ಪುದೀನಾ ಎಣ್ಣೆಯಲ್ಲಿ ಉಪ್ಪು ಮತ್ತು ನೀರನ್ನು ಬೆರೆಸಿ ಜಿರಳೆ ಇರುವ ಸ್ಥಳಗಳಿಗೆ ಸಿಂಪಡಿಸಿ. ಅವುಗಳನ್ನು ಹೋಗಲಾಡಿಸುತ್ತದೆ.

3. ಸೀಮೆ ಎಣ್ಣೆಯ ಪರಿಹಾರ: ಇತ್ತೀಚಿನ ದಿನಗಳಲ್ಲಿ ಸೀಮೆ ಎಣ್ಣೆ ಅನೇಕ ನಗರಗಳಲ್ಲಿ ಲಭ್ಯವಿಲ್ಲ. ಇನ್ನು, ಎಲ್ಲಿಂದಲೋ ಸ್ವಲ್ಪ ಹುಲ್ಲುಕಡ್ಡಿ ಅಂದರೆ ಸೀಮೆಎಣ್ಣೆ ಸಿಕ್ಕರೆ, ಮನೆಯಲ್ಲಿ ಜಿರಳೆಗಳು ಎಲ್ಲೆಲ್ಲಿ ಬೀಡುಬಿಟ್ಟಿವೆಯೋ ಅಲ್ಲೆಲ್ಲಾ ಸೀಮೆ ಎಣ್ಣೆಯನ್ನು ಸಿಂಪಡಿಸಿ. ಇದೂ ಕೂಡ ಉತ್ತಮ ಪರಿಹಾರವಾಗಿದೆ.

4. ಅಡಿಗೆ ಸೋಡಾ ಬಳಕೆ: ಜಿರಳೆಗಳನ್ನು ತೊಡೆದುಹಾಕಲು, ಅಡುಗೆ ಸೋಡಾದಲ್ಲಿ ಸ್ವಲ್ಪ ಸಕ್ಕರೆಯನ್ನು ಬೆರೆಸಿ ಮತ್ತು ಜಿರಳೆ ಇರುವಲ್ಲಿ ಇರಿಸಿ. ನೀವು ಅಡಿಗೆ ಸೋಡಾ ಮತ್ತು ಸಕ್ಕರೆಯನ್ನು ನೀರಿನೊಂದಿಗೆ ಬೆರೆಸಬಹುದು. ಹೀಗೆ ಮಾಡಿದರೂ ಜಿರಳೆಗಳೆಲ್ಲ ಸಲೀಸಾಗಿ ಓಡಿಹೋಗುತ್ತವೆ.

5. ಪುಲಾವ್ ಎಲೆ ಪರಿಣಾಮಕಾರಿ ಪರಿಹಾರ: ಪುಲಾವ್ ಎಲೆಗಳನ್ನು ಸಣ್ಣ ಭಾಗಗಳಾಗಿ ಕತ್ತರಿಸಿ ಮನೆಯ ವಿವಿಧ ಮೂಲೆಗಳಲ್ಲಿ ಇರಿಸಿ. ಜಿರಳೆಗಳು ಪುಲಾವ್ ಎಲೆಗಳ ವಾಸನೆಯಿಂದ ಓಡಿಹೋಗುತ್ತವೆ. ಪುಲಾವ್ ಎಲೆಗಳ ಹೊರತಾಗಿ, ಪುಲಾವ್ ಎಲೆಗಳನ್ನು ಮನೆಯಲ್ಲಿ ಇಡುವುದರಿಂದ ಜಿರಳೆಗಳ ಸಮಸ್ಯೆಯನ್ನು ತಪ್ಪಿಸಬಹುದು. ನೀವು ಬಯಸಿದರೆ, ನೀವು ಎರಡೂ ಎಲೆಗಳನ್ನು ಒಟ್ಟಿಗೆ ಇಡಬಹುದು.

6. ಬಿರುಕುಗಳನ್ನು ತುಂಬಿಸಿ: ಮನೆಯಲ್ಲಿ ಇರುವ ಬಿರುಕುಗಳು ಕೀಟಗಳ ನೆಲೆಯಾಗಿದೆ. ನಿಮ್ಮ ನೆಲ ಮತ್ತು ಕಿಚನ್ ಸಿಂಕ್‌ನಲ್ಲಿರುವ ಬಿರುಕುಗಳನ್ನು ಬಿಳಿ ಸಿಮೆಂಟ್ ಸಹಾಯದಿಂದ ತುಂಬಿಸಿ. ಜಿರಳೆಗಳು ಈ ಬಿರುಕುಗಳ ಒಳಗೆ ಅಡಗಿಕೊಳ್ಳುತ್ತವೆ ಮತ್ತು ಮೊಟ್ಟೆಗಳನ್ನು ಇಡುತ್ತವೆ. ಬಿರುಕುಗಳನ್ನು ಮುಚ್ಚಿದಾಗ, ಜಿರಳೆಗಳು ಯಾವುದೇ ಸ್ಥಳವನ್ನು ಕಂಡುಕೊಳ್ಳುವುದಿಲ್ಲ ಮತ್ತು ಅವುಗಳು ತಮ್ಮಷ್ಟಕ್ಕೇ ಕಡಿಮೆಯಾಗುತ್ತವೆ.

# ಫೆ.16 ರಿಂದ 29ರ ವರೆಗೆ ಆಯುಗಣ್ಮನ್ ಭಾರತ ಪ್ರಧಾನಮಂತ್ರಿ ಜನಾರೋಗ್ಯ ಯೋಜನೆ ಮುಖ್ಯಮಂತ್ರಿಗಳ ಆರೋಗ್ಯ ಕರ್ನಾಟಕ ಯೋಜನೆ; ಅವಳಿನಗರದ 102 ಕೇಂದ್ರ್ರಗಳಲ್ಲಿ ಆರೋಗ್ಯ ಕರ್ನಾಟಕ ಕಾರ್ಡ್ ನೋಂದಣಿ ಅಭಿಯಾನ: ಜಿಲ್ಲಾಧಿಕಾರಿ ದಿವ್ಯ ಪ್ರಭು

ಧಾರವಾಡ: ಆರೋಗ್ಯ ಕ್ಷೇತ್ರದ ಬಹು ಮುಖ್ಯ ಯೋಜನೆಯಾಗಿರುವ ಆಯುಗಣ್ಮನ್ ಭಾರತ ಪ್ರಧಾನಮಂತ್ರಿ ಜನಾರೋಗ್ಯ ಯೋಜನೆ ಮುಖ್ಯಮಂತ್ರಿಗಳ ಆರೋಗ್ಯ ಕರ್ನಾಟಕ ಗುರುತಿನ ಪತ್ರ (ಕಾರ್ಡ) ನೋಂದಣಿಗೆ ಫೆಬ್ರವರಿ 16 ರಿಂದ 29 ರವರೆಗೆ ಅವಳಿ ನಗರದ 102 ಸ್ಥಳಗಳಲ್ಲಿ ಬೃಹತ ಅಭಿಯಾನವನ್ನು ಹಮ್ಮಿಕೊಳ್ಳಲಾಗಿದೆ ಎಂದು ಜಿಲ್ಲಾಧಿಕಾರಿ ದಿವ್ಯ ಪ್ರಭು ಅವರು ತಿಳಿಸಿದ್ದಾರೆ.

ಈ ಕುರಿತು ಪ್ರಕಟಣೆ ನೀಡಿರುವ ಅವರು, ಕೇಂದ್ರ ಮತ್ತು ರಾಜ್ಯ ಸರ್ಕಾರದ ಬಹು ಮುಖ್ಯ ಯೋಜನೆಯಾಗಿರುವ ಆಯುಗಣ್ಮನ್ ಭಾರತ ಪ್ರಧಾನಮಂತ್ರಿ ಜನಾರೋಗ್ಯ ಯೋಜನೆ ಮುಖ್ಯಮಂತ್ರಿಗಳ ಆರೋಗ್ಯ ಕರ್ನಾಟಕದ ನೋಂದಣಿಗಾಗಿ ಹುಬ್ಬಳ್ಳಿ ಮತ್ತು ಧಾರವಾಡ ನಗರದ ಪ್ರಮುಖ ಸ್ಥಳ ಹಾಗೂ ಪಡಿತರ ಅಂಗಡಿಗಳಲ್ಲಿ ಕೇಂದ್ರಗಳನ್ನು ತೆರೆದು, ಆರೋಗ್ಯ ಇಲಾಖೆಯ ಸಿಬ್ಬಂದಿಗಳು ಕರ್ತವ್ಯ ನಿರ್ವಹಿಸಲಿದ್ದಾರೆ ಎಂದು ಅವರು ತಿಳಿಸಿದ್ದಾರೆ.

ನೋಂದಣಿಗೆ ಅಗತ್ಯ ದಾಖಲೆ: ಆಯುಗಣ್ಮನ್ ಭಾರತ ಪ್ರಧಾನಮಂತ್ರಿ ಜನಾರೋಗ್ಯ ಯೋಜನೆ ಮುಖ್ಯಮಂತ್ರಿಗಳ ಆರೋಗ್ಯ ಕರ್ನಾಟಕ ಯೋಜನೆಗೆ ನೋಂದಣಿಯಾಗಲು ಬಿಪಿಎಲ್ ಅಥವಾ ಎಪಿಎಲ್ ಕಾರ್ಡ್ ಹೊಂದಿರಬೇಕು. ಮತ್ತು ನೋಂದಣಿಗೆ ಆಧಾರ ಕಾರ್ಡ, ಬಿಪಿಎಲ್ ಅಥ-'ವಾ ಎಪಿಎಲ್ ಕಾರ್ಡ್ ಮತ್ತು ಆಧ-,ಾರ ನೋಂದಾಯಿತ ಮೋಬೈಲ್ ನಂಬರ ಇರಬೇಕು. 5 ವರ್ಷ ಮೇಲ್ಪಟ್ಟ ಪ್ರತಿಯೊಬ್ಬರು ಈ ಎಬಿಆರ್ಕೆ ಆರೋಗ್ಯ ಕಾರ್ಡ್ ಹೊಂದಲು ಅವಕಾಶವಿದೆ. ಎಬಿಆರ್ಕೆ ಕಾರ್ಡ್ ನೋಂದಣಿ ಉಚಿತವಾಗಿದೆ ಎಂದು ಜಿಲ್ಲಾಧಿಕಾ-ರಿಗಳು ತಿಳಿಸಿದ್ದಾರೆ.



ಆರೋಗ್ಯ ಕ್ಷೇತ್ರದ ಬಹುಮುಖ್ಯ ಯೋಜನೆ ಆಗಿರುವ ಆಯುಗಣ್ಮನ್ ಭಾರತ ಪ್ರಧಾನಮಂತ್ರಿ ಜನಾರೋಗ್ಯ ಯೋಜನೆ ಮುಖ್ಯಮಂತ್ರಿಗಳ ಆರೋಗ್ಯ ಕರ್ನಾಟಕಕ್ಕೆ ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ನೋಂದಣಿಯಾಗಿ, ಪ್ರತಿಯೊಬ್ಬರು ಇದರ ಸದುಪಯೋಗ ಪಡೆದುಕೊಳ್ಳಬೇಕು. ಇದ್ದಕ್ಕಾಗಿ ಬೃಹತ ನೋಂದಣಿ ಅಭಿಯಾನವನ್ನು ಫೆ.16 ರಿಂದ 29 ರವರೆಗೆ ಸಂಘಟಿಸಿದ್ದು, ಹುಬ್ಬಳ್ಳಿಯಲ್ಲಿ ಪ್ರತಿದಿನ ಪ್ರಮುಖ 8 ಬೇರೆ ಬೇರೆ ಸ್ಥಳಗಳಲ್ಲಿ ಮತ್ತು ಧಾರವಾಡದಲ್ಲಿ ಪ್ರತಿದಿನ ಪ್ರಮುಖ 5 ಸ್ಥಳಗಳಲ್ಲಿ ನೋಂದಣಿ ಅಭಿಯಾನ ನಡೆಸಲಾಗುವುದು. ಒಟ್ಟಾರೆ 15 ದಿನಗಳ ಈ ನೋಂದಣಿ ಅಭಿಯಾನದಲ್ಲಿ ಹುಬ್ಬಳ್ಳಿಯ 71 ಮತ್ತು ಧಾರವಾಡದ 31 ಸ್ಥಳಗಳು ಸೇರಿ 102 ಕೇಂದ್ರಗಳಲ್ಲಿ ಎಬಿಆರ್ಕೆ ಕಾರ್ಡ್ ನೋಂದಣಿ ಮಾಡಿಕೊಳ್ಳಲಾಗುವುದು ಎಂದು ಜಿಲ್ಲಾಧಿಕಾರಿ ದಿವ್ಯ ಪ್ರಭು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನೋಂದಣಿ ದಿನಾಂಕ, ಸ್ಥಳ ಮತ್ತು ಸಮಯ: ಆಯುಗಣ್ಮನ್ ಭಾರತ ಪ್ರಧಾನಮಂತ್ರಿ ಜನಾರೋಗ್ಯ ಯೋಜನೆ ಮುಖ್ಯಮಂತ್ರಿಗಳ ಆರೋಗ್ಯ ಕರ್ನಾಟಕ ಯೋಜನೆಯ ಗುರುತಿನ ಪತ್ರದ ನೋಂದಣಿ ಅಭಿಯಾನವು ಫೆ.16 ರಿಂದ 29 ರವರೆಗೆ ಗೊತ್ತುಪಡಿಸಿರುವ ಆಯ್ದ ಕೇಂದ್ರಗಳಲ್ಲಿ ಬೆಳಿಗ್ಗೆ 10 ಗಂಟೆಯಿಂದ ಸಂಜೆ 5 ಗಂಟೆಯವರೆಗೆ ನೋಂದಣಿ ಕಾರ್ಯ ನಡೆಯಲಿದೆ.


ಧಾರವಾಡ ನೋಂದಣಿ ಸ್ಥಳಗಳ ವಿವರ: ಫೆಬ್ರುವರಿ 16 ಮತ್ತು 17 ರಂದು ಪುರೊಹಿತ ನಗರದ ಗಾರ್ಮೆಂಟ್ ಫ್ಯಾಕ್ಟರಿ, ಕೇಲಗೇರಿಯ ದ್ಯಾಮ್ಮವ್ವನ ಗುಡಿ, ಮಾಳಾಪುರದ ಪಡಿತರ ಅಂಗಡಿ, ಮೆದಾರ ಓಣಿಯ ಬಸವಣ್ಣನ ಗುಡಿ ಮತ್ತು ಲಕ್ಷ್ಮೀಸಿಂಗನಕೇರಿಯ ಪಡಿತರ ಅಂಗಡಿ. ಫೆ.18 ಮತ್ತು 19 ರಂದು ಚಪ್ಪರಬಂದ ಕಾಲೋನಿಯ ಪಡಿತರ ಅಂಗಡಿ, ಜನ್ನತನಗರದ ಪಡಿತರ ಅಂಗಡಿ, ಎತ್ತಿನಗುಡ್ಡದ ಪಡಿತರ ಅಂಗಡಿ, ಶ್ರೀನಗರದ ಪಡಿತರ ಅಂಗಡಿ, ನೆಹರು ನಗರದ ಹನುಮಂತ ದೇವರ ಗುಡಿ. ಫೆ.20 ಮತ್ತು 21 ರಂದು ಕೆಲಗೇರಿಯ ಕಲ್ಮೇಶ್ವರ ಗುಡಿ, ತೇಜಸ್ವಿ ನಗರದ ಹನುಮಂತ ದೇವರ ಗುಡಿ, ಮಸಲಗಾರ ಓಣಿಯ ಪಡಿತರ ಅಂಗಡಿ, ನವಲೂರಿನ ದುರ್ಗಾದೇವಿ ಗುಡಿ, ರಾಯಾಪುರದ ಅಂಗನವಾಡಿ ವೇಡರನರಿ ಹಾಸ್ಪಿಟಲ್. ಫೆ.22 ಮತ್ತು 23 ರಂದು ಹೊಸಯಲ್ಲಾಪುರ ರೋಡಿನ ಪಡಿತರ ಅಂಗಡಿ, ವಾಲ್ಮಿಕಿ ಓಣಿಯ ಅಂಭಾಭವಾನಿ ಗುಡಿ, ಭಾವಿಕಟ್ಟಿ ಪ್ಲಾಟ್ನ ಹನುಮಾನ್ ಮಂದಿರ, ಸಿದ್ದೇಶ್ವರ ನಗರದ ಪಡಿತರ ಅಂಗಡಿ. ಫೆ.26 ಮತ್ತು 27 ರಂದು ರಾಜೀವ ಗಾಂಧೀ ನಗರದ ಪಡಿತರ ಅಂಗಡಿ, ಚಪ್ಪರಬಂದ ಕಾಲೋನಿಯ ಪಡಿತರ ಅಂಗಡಿ, ತಡಸಿನಕೊಪ್ಪದ ಪಡಿತರ ಅಂಗಡಿ, ಸುತಗಟ್ಟಿಯ ಪಡಿತರ ಅಂಗಡಿ, ಇಟಿಗಟ್ಟಿಯ ಪಡಿತರ ಅಂಗಡಿ. ಫೆ.29 ರಂದು ನುಗ್ಗಿಕೇರಿಯ ಪಡಿತರ ಅಂಗಡಿ, ಗುಲಗಂಜಿಕೊಪ್ಪದ ಪಡಿತರ ಅಂಗಡಿ, ಮನಕಿಲ್ಲಾದ ದುರ್ಗಾದೇವಿ ಗುಡಿ, ಕಮಲಾಪುರದ ಬಸವಣ್ಣನ ಗುಡಿ, ನವಲೂರಿನ ಕರೆಮ್ಮನ ಗುಡಿ-ಅಗಸಿ ಕೋಳಿ ಕೆರಿ, ಸತ್ತೂರ ಆಶ್ರಯ ಕಾಲೋನಿಯ ಪಡಿತರ ಅಂಗಡಿ.

# 89ನೇ ವಯಸ್ಸಿನಲ್ಲಿ ಪಿಹೆಚ್‌ಡಿ ಪದವಿ ಮುಗಿಸಿದ ಅಜ್ಜ

ಧಾರವಾಡ: ಸಾಧಿಸುವ ಛಲವೊಂದಿದ್ದರೆ ಏನನ್ನಾದರೂ ಸಾಧಿಸಬಹುದು. ಸಾಧನೆಗೆ ವಯಸ್ಸು ಅಡ್ಡಿಯಾಗುವುದಿಲ್ಲ ಎಂಬುದನ್ನು ಧಾರವಾಡದ ಹಿರಿಯ ಅಜ್ಜರೊಬ್ಬರು ಸಾಬೀತು ಪಡಿಸಿದ್ದಾರೆ.

ಜಯನಗರದಲ್ಲಿರುವ ಮಾರ್ಕಂಡೇಯ ದೊಡಮನಿ ಎಂಬವರು ತಮ್ಮ 89ನೇ ವಯಸ್ಸಿನಲ್ಲಿ ಪಿಹೆಚ್‌ಡಿ ಮುಗಿಸಿ ಇದೀಗ ಡಾಕ್ಟರೇಟ್ ಪದವಿ ಪಡೆದು ಕೊಂಡಿದ್ದಾರೆ.

ಕರ್ನಾಟಕ ವಿಶ್ವವಿದ್ಯಾಲಯ ಕನ್ನಡ ಅಧ್ಯಯನ ಪೀಠದಲ್ಲಿ ನೂರಾರು ಜನ ಶಿವಶರಣರ ಬಗ್ಗೆ ಅಧ್ಯಯನ ಮಾಡಿ ಪಿಎಚ್‌ಡಿ ಮಾಡಿದ್ದಾರೆ.



ರಾಜ್ಯದ ಶೈಕ್ಷಣಿಕ ಇತಿಹಾಸದಲ್ಲೇ ಇದೇ ಮೊದಲ ಬಾರಿಗೆ ಈ ಇಳಿ ವಯಸ್ಸಿನ ವೃದ್ಧರೊಬ್ಬರು ಪಿಎಚ್‌ಡಿ ಪದವಿಯನ್ನ ಪಡೆದು ಕೊಂಡಿರುವುದು. ಡೋಹರ ಕಕ್ಕಯ್ಯನವರು ಬರೆದ ಕೇವಲ 6 ವಚನಗಳನ್ನು ಮುಂದಿಟ್ಟುಕೊಂಡು 150 ಪುಟಗಳುಳ್ಳ "ಶಿವಶರಹಣ ಡೋಹರ ಕಕ್ಕಯ್ಯ" ಒಂದು ಅಧ್ಯಯನ ಎಂಬ ಮಹಾ ಪ್ರಬಂಧವನ್ನು ಅವರು ಬರೆದಿದ್ದು, ಸತತ 18 ವರ್ಷಗಳಿಂದ ಕಕ್ಕಯ್ಯನವರ ಬಗ್ಗೆ ಮಾಹಿತಿ ಸಂಗ್ರಹಿಸಿದ್ದಾರೆ.

ಈ ಅವಧಿಯಲ್ಲಿ ಅವರ ಗೈಡ್ ನಿಧನರಾದ ಹಿನ್ನೆಲೆ ಪ್ರಬಂಧ ಸಿದ್ಧಪಡಿಸಲು ವಿಳಂಬವಾಯಿತು. ಆ ನಂತರ ಡಾ.ನಿಂಗಪ್ಪ ಅವರು ಮಾರ್ಗದರ್ಶನ ಮಾಡಿದ್ದಾರೆ.

ಕಾದ್ರೊಳ್ಳಿ, ಕಕ್ಕೇರಿ ಸೇರಿದಂತೆ ಇತರ ಕಡೆಗಳಲ್ಲಿ ಸಂಚರಿಸಿ ಕಕ್ಕಯ್ಯನವರ ಬಗ್ಗೆ ಅಧ್ಯಯನ ಮಾಡಿ ಮಹಾಪ್ರಬಂಧವನ್ನು ಅವರು ಸಿದ್ಧಪಡಿಸಿದ್ದಾರೆ.

ಡೋಹರ ಸಮುದಾಯದ ಚ-ರಿತ್ರೆ, ಬಸವಣ್ಣನವರ ವಚನಗಳಲ್ಲಿ ಕಕ್ಕಯ್ಯನವರನ್ನು ಸ್ಮರಿಸಿಕೊಂಡಿರುವುದು, ಧಾರವಾಡ ಸಮೀಪದಲ್ಲೇ ಕಕ್ಕಯ್ಯ ಪ್ರಾಣ ಬಿಟ್ಟಿರುವುದು, ಗುಜರಾತ್, ಕಾಶ್ಮೀರ ಮತ್ತು ತಮಿಳುನಾಡು ಮೂಲದಿಂದ ಕಲ್ಯಾಣಕ್ಕೆ ಬಂದ ಶಿವಶರಣರ ನಂಟು ಇವೆಲ್ಲದರ ಮೇಲೆ ಮಾರ್ಕಂಡೇಯ ಸಮಗ್ರ ಬೆಳಕು ಚೆಲ್ಲಿದ್ದಾರೆ.

# ವಿಶೇಷ ಮಕ್ಕಳೊಂದಿಗೆ ಜನ್ಮದಿನ ಆಚರಿಸಿಕೊಂಡ ಸಚಿವೆ ಲಕ್ಷ್ಮೀ ಹೆಬ್ಬಾಳಕರ್

ಬೆಳಗಾವಿ: ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ಸಚಿವೆ ಲಕ್ಷ್ಮೀ ಹೆಬ್ಬಾಳಕರ್ ಅವರು ಬುಧವಾರ ತಮ್ಮ ಹುಟ್ಟುಹಬ್ಬವನ್ನು ಬೆಳಗಾವಿಯ ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆಯ ವಿಶೇಷ ಶಾಲೆಯ ಕಿವುಡ – ಮೂಕ, ಅಂಧ ಹಾಗೂ ಬುದ್ಧಿಮಾಂದ್ಯ ಮಕ್ಕಳೊಂದಿಗೆ ಸರಳವಾಗಿ ಆಚರಿಸಿಕೊಂಡರು.



ಹುಟ್ಟಹಬ್ಬದ ಪ್ರಯುಕ್ತ ನೂರಾರು ಜನರು, ಮಠಾಧೀಶರು, ವಿವಿಧ ಮಹಿಳಾ ಸಂಘಟನೆಗಳ ಸದಸ್ಯರು, ವಿಕಲಚೇತನರು, ಪಕ್ಷದ ಮುಖಂಡರು ಹಾಗೂ ಕಾರ್ಯಕರ್ತರು ಪ್ರೀತಿ ಪೂರ್ವಕ ಶುಭಾಶಯ ಕೋರಿ, ಆಶೀರ್ವದಿಸಿದರು.

# ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದಿಂದ ಅರ್ಜಿ ಆಹ್ವಾನ

ಬೆಳಗಾವಿ: ಮೈಸೂರಿನ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ 2023–24ನೇ ಸಾಲಿನ (ಜನವರಿ ಆವೃತ್ತಿಯ) ವಿವಿಧ ಕೋರ್ಸ್‌ಗಳಿಗೆ ಪ್ರವೇಶ ಪಡೆಯಲು ಅರ್ಹ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ.

ಪ್ರಥಮ ಬಿ.ಎ. ಬಿಕಾಂ, ಬಿಸಿಎ ಹಾಗೂ ಪ್ರಥಮ ಎಂಎ ಕನ್ನಡ, ಇಂಗ್ಲೀಷ್, ಹಿಂದಿ, ಉರ್ದು, ಇತಿಹಾಸ, ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ, ಅರ್ಥಶಾಸ್ತ್ರ, ರಾಜ್ಯಶಾಸ್ತ್ರ, ಸಮಾಜ ಶಾಸ್ತ್ರ, ಸಾರ್ವಜನಿಕ ಆಡಳಿತ, ಸಮೂಹ ಮತ್ತು ಪತ್ರಿಕೋದ್ಯಮ, ಎಂಎಸ್‌ಸಿ, ಎಂಎಸ್.ಡಬ್ಲ್ಯೂ, ಬಿಎಸ್.ಡಬ್ಲ್ಯೂ, ಎಂಸಿಎ ಹಾಗೂ ಡಿಪ್ಲೋಮಾ ಕೋರ್ಸ್‌ಗಳಿಗೆ ಅರ್ಜಿ ಸಲ್ಲಿಸಬಹುದಾಗಿದೆ.

ಬಿಪಿಎಲ್ ಕಾರ್ಡ್ ಹೊಂದಿರುವ ಮಹಿಳಾ ಅಭ್ಯರ್ಥಿಗಳಿಗೆ ಬೋಧನಾ ಶುಲ್ಕದಲ್ಲಿ ಶೇ. 15 ರಷ್ಟು ವಿನಾಯಿತಿ ನೀಡಲಾಗಿದೆ. ದಂಡ ಶುಲ್ಕವಿಲ್ಲದೆ ಪ್ರವೇಶ ಪಡೆಯಲು ಮಾರ್ಚ್ 31 ಅಂತಿಮ ದಿನವಾಗಿದೆ. ಹೆಚ್ಚಿನ ಮಾಹಿತಿಗಾಗಿ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಬಿಎಡ್ ಕಾಲೇಜು ಆವರಣ, ನೆಹರು ನಗರ, ಬೆಳಗಾವಿ ಮೊ.ಸಂ ( 9606040407 ಹಾಗೂ ದೂರವಾಣಿ : 0831–2002815) ಹಾಗೂ ವಿಶ್ವವಿದ್ಯಾನಿಲಯದ ವೆಬ್‌ಸೈಟ್ **www.ksoumysuru.ac.in** ಸಂಪರ್ಕಿಸಬಹುದು ಎಂದು ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯ ಬೆಳಗಾವಿ ಪ್ರಾದೇಶಿಕ ಕೇಂದ್ರದ ನಿರ್ದೇಶಕರಾದ ಅಮೃತ್ ಎಂ. ನಾಯ್ಡು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಅಪರಿಚಿತ ವ್ಯಕ್ತಿ ಶವ ಪತ್ತೆ



ಬೆಳಗಾವಿ: ಉಗಾರಖುರ್ದದ ರೈಲು ನಿಲ್ದಾಣ ಹತ್ತಿರ ಹರಿಪ್ರಿಯಾ ಎಕ್ಸ್‌ಪ್ರೆಸ್ ರೈಲಿನಿಂದ ಬಿದ್ದು ಗಾಯಗೊಂಡಿ ಕಾರಣ ಕಾಗವಾಡ ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆಗೆ ಒಳಪಡಿಸಲಾಗಿದ್ದು, ಚಿಕಿತ್ಸೆ ಫಲಿಸದೇ ವ್ಯಕ್ತಿ ಸಾವನಪಿರುತ್ತಾನೆ. ಚಹರೆ: ಮೃತನ ಅಂದಾಜು ವಯಸ್ಸು 40–45,. ಎತ್ತರ 5.7 ಇರುತ್ತದೆ. ಸಾದ ಗಪ್ಪು ಮೈ ಬಣ್ಣ, ಉದ್ದ ಮುಖ, ಎದೆಯ ಮೇಲೆ ಏ ಹಾಗೂ ಹಣಮಂತ ದೇವರ ಹಚ್ಚೆ, ಬಲಗೈ ಮೇಲೆ ತಾಯಿ ದೇವರು ಮತ್ತು ನಾಗದೇವತೆ ಹಚ್ಚೆ, ಬಲಗೈ ಮೇಲೆ ಏಒಖಕಅ ಹಚ್ಚೆ, ಎಡಗೈ ಮೇಲೆ ನವಿಲಿನ ಹಚ್ಚೆ ಇರುತ್ತದೆ. ಕೆಂಪು ಬಣ್ಣದ ಚಕ್ಸ್ ಪುಲ್ ಶರ್ಟ್, ಚಾಕಲೇಟ್ ಬಣ್ಣದ ಚಕ್ಸ್ ಪುಲ್ ಪ್ಯಾಂಟ್ ಧರಿಸಿರುತ್ತಾನೆ. ಮೃತನ ವಾರಸುದಾರರ ಬಗ್ಗೆ ತಿಳಿದು ಬಂದಲ್ಲಿ ನಗರದ ರೈಲ್ವೆ ಪೊಲೀಸ್ ಠಾಣೆ ದೂರವಾಣಿ 0831–2405273 ಪಿಎಸ್ಐ 94808022127 ಅಥವಾ ರೈಲ್ವೆ ಪೊಲೀಸ್ ನಿಯಂತ್ರಣ ಕೊಠಡಿ 080–22871291 ಸಂಖ್ಯೆಗೆ ಸಂಪರ್ಕಿಸಬಹುದು ಎಂದು ಬೆಳಗಾವಿ ರೈಲ್ವೆ ಪೊಲೀಸ್ ಠಾಣೆಯ ಆರಕ್ಷಕ ಉಪನಿ-ರೀಕ್ಷಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಸುಳುಗೋಡಿನಲ್ಲಿ ಸಂವಿಧಾನ ಜಾಗೃತಿ ಜಾಥಾ



ಶಿವಮೊಗ್ಗ: ಹೊಸನಗರ ತಾಲ್ಲೂಕಿನ ಸುಳುಗೋಡು ಗ್ರಾಮಕ್ಕೆ ಇಂದು ಸಂವಿಧಾನ ಜಾಗೃತಿ ಜಾಥಾ ಆಗಮಿಸಿದ್ದು ಅದ್ದೂ-ರಿಯಾಗಿ ಸ್ವಾಗತಿಸಲಾಯಿತು. ಜಾಥಾ ಬಸ್ ನಿಲ್ದಾಣದಿಂದ ಗ್ರಾಮ ಪಂಚಾಯತ್ ಸಭಾಭವನದವರೆಗೆ ಸಾಗಿ ಬಂದಿತು.

ಗ್ರಾ.ಪಂ ಅಧ್ಯಕ್ಷೆ ಶೃತಿ ಶೇಷಾದ್ರಿ, ಉಪಾಧ್ಯಕ್ಷ ಸುಧೀರ್ ಕುಮಾರ್ ಎಸ್ ಎಸ್, ಸರ್ಕಾರಿ ಪ್ರೌಢಶಾಲಾ ಶಿಕ್ಷಕ ನಾಗರಾಜ್, ಹಿರಿಯ ಪ್ರಾಥಮಿಕ ಶಾಲಾ ಶಿಕ್ಷಕಿ ಲತಾ, ಪಿಡಿಓ ಹ-ರಿಶ್ಚಂದ್ರ, ಅಂಗನವಾಡಿ, ಆಶಾ ಕಾರ್ಯಕರ್ತೆಯರು, ವಿದ್ಯಾರ್ಥಿಗಳು, ವಿವಿಧ ಸಂಘ ಸಂಸ್ಥೆಗಳ ಮಹಿಳೆಯರು, ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.

# ಸಾಗರದಲ್ಲಿ ಸಡಗರದಿಂದ ಸಂಪನ್ನಗೊಂಡ ಸಂವಿಧಾನ ಜಾಗೃತಿ ಐಕ್ಯತಾ ಜಾಥಾ

ಪ್ರವಾಸಿಗರ ಸ್ವರ್ಗ, ವಿಶ್ವ ಖ್ಯಾತಿಯ ಜೋಗ ಜಲಪಾತದ ನಾಡು, ಶ್ರೀಗಂಧದ ಕೆತ್ತನೆಯ ಪ್ರಸಿದ್ಧ ತಾಣ, ಐತಿಹಾಸಿಕ ಸಂಗ್ರಹಾಲಯವಿರುವ ಕೆಳದಿ, ಹೊಯ್ಸಳ ಶೈಲಿಯ ಕೆತ್ತನೆಯಿರುವ ಇಕ್ಕೇರಿ ಶರಾವತಿ ಹಿನ್ನಿರಿನ ಸುಂದರ ತಾಣ–ಹೊನ್ನೆಮರಡು, ಸಂಭ್ರಮದ ಮಾರಿಕಾಂಬ ಜಾತ್ರೆ ಉತ್ಸವ, ವರದಹಳ್ಳಿ, ಸಿಂಗಧೂರು, ಲಿಂಗನಮಕ್ಕಿ ಜಲಾಶಯ ಕೆ.ವಿ ಸುಬ್ಬಣ್ಣರವರು ಕಟ್ಟಿ-ಬೆಳಸಿದ ನೀನಾಸಂ, ಯಕ್ಷಗಾನ ಕಲಾ ಪ್ರಕಾರಗಳಿಗೆ ಪ್ರಸಿದ್ಧ ತಾಣ, ಅಡಿಕೆಯ ನಾಡು ಸಾಗರ.

ಹೀಗೆ ಭಾರತವನ್ನು ಕರ್ನಾಟಕದಲ್ಲಿ ನೋಡಬಹುದು ಎಂದಾದರೆ ಕರ್ನಾಟಕವನ್ನು ಸಾಗರದಲ್ಲೂ ನೋಡಬಹುದಾಗಿದೆ. ಇಂತಹ ವೈವಿಧ್ಯಮಯ ಐತಿಹ್ಯದ ಸಾಗರ ತಾಲ್ಲೂಕಿಗೆ ಸಂವಿಧಾನವನ್ನು ಪರಿಚಯಿಸುವ ಸಮಾಜ ಕಲ್ಯಾಣ ಇಲಾಖೆಯ ಕಾರ್ಯಕ್ರಮ "ಸಂವಿಧಾನ ಜಾಗೃತಿ ಜಾಥಾ" ಫೆಬ್ರವರಿ 05 ರಂದು ಪವಗೋಡು ಗ್ರಾಮ ಪಂಚಾಯಿತಿಯನ್ನು ಪ್ರವೇಶಿಸಿತು.



ಸಾಗರ ತಾಲ್ಲೂಕು ಸಮಾಜ ಕಲ್ಯಾಣಾಧಿಕಾರಿಗಳಾದ ಸುರೇಶ್ ಸಹಾನೆ ಮತ್ತು ಇತರೆ ಅಧಿಕಾ-ರಿಗಳು, ಸಿಬ್ಬಂದಿಗಳು ಪವಗೋಡು ಪಂಚಾಯಿತಿಯ ಅಧ್ಯಕ್ಷರು, ಉಪಾಧ್ಯಕ್ಷರು, ಸದಸ್ಯರು ವಿವಿಧ ಸ್ತ್ರೀ ಶಕ್ತಿ ಸಂಘಗಳಿಂದ ಆಗಮಿಸಿದ ಮಹಿಳೆಯರಿಂದ ಪೂರ್ಣ ಕುಂಭ ಸ್ವಾಗತ, ವಿದ್ಯಾರ್ಥಿಗಳಿಂದ ಜೈಕಾರ ಹಾಗೂ ರಾಜ ಬೀದಿ ಉತ್ಸವದೊಂದಿಗೆ ಚಲಿಸಿ ಜನಸಾಮಾನ್ಯರ ಅಭೂತ ಪೂರ್ವ ಸ್ವಾಗತದೊಂದಿಗೆ ಮುಂದುವರೆದು ಗ್ರಾಮ ಪಂಚಾಯಿತಿಗಳಾದ ನಾಡಕಲಸಿ, ಭೀಮನೇರಿ, ಕಲ್ಮನೆ, ಅವಿನಹಳ್ಳಿ, ತ್ಯಾಗರ್ತಿ ಹೊಸೂರು, ಯಡೇಹಳ್ಳಿ ಮಾಸೂರು, ಹಿರೆನಲ್ಲೂರು, ಉಳ್ಳೂರು, ಗೌತಮಪುರ ಹೀಗೆ ಎಲ್ಲಾ 38 ಪಂಚಾಯಿತಿಗಳಲ್ಲಿ ಮತ್ತು ಪಟ್ಟಣ ಪಂಚಾಯಿತಿಗಳಲ್ಲಿ ಸಾರ್ವಜನಿಕರ ಸಹಕಾರದೊಂದಿಗೆ ಸಂವಿಧಾನದ ಮೂಲ ಆಶಯಗಳನ್ನು ಹೊತ್ತ ಐಕ್ಯತ ಜಾಥಾ ಸಂಚರಿಸಿತು.

ಸಾಗರದ ಜನರ ಹೃದಯ ವೈಶಾಲ್ಯತೆ ಸಾಗರದಷ್ಟೇ ದೊಡ್ಡದು ಎನ್ನುವಂತೆ ಫೆಬ್ರವರಿ 05 ರಿಂದ 12 ರವರೆಗೆ ಒಟ್ಟು 07 ದಿನಗಳ ಕಾಲ ನಡೆದ ಜಾಥಾದಲ್ಲಿ ಪ್ರತಿ ಪಂಚಾಯಿತಿಗಳಲ್ಲಿ ಪೂರ್ಣ ಕುಂಭ ಸ್ವಾಗತ, ಎತ್ತಿನ ಗಾಡಿ, ಮೆರವಣಿಗೆ, ಬೈಕ್ ಆಟೋ ರ್ಯಾಲಿಗಳಲ್ಲಿ ಹಾಗೂ ವಿವಿಧ ಶಾಲಾ ವಿದ್ಯಾರ್ಥಿಗಳಿಂದ ವೈವಿಧ್ಯಮಯ ಕಾರ್ಯಕ್ರಮಗಳಾದ ಹಾಡು, ಕವನ ವಾಚನ, ನಾಟಕ ಪ್ರದರ್ಶನ, ಡೊಳ್ಳು ಕುಣಿತದೊಂದಿಗೆ ಜಾಥಾ ಕಾರ್ಯಕ್ರಮನ್ನು ಯಶಸ್ವಿಗೊಳಿಸಲಾಯಿತು.

ವಿಶ್ವದ ಅತ್ಯಂತ ವಿಸ್ತಾರ ಲಿಖಿತ ಸಂವಿಧಾನ ನಮ್ಮದು. ದೇಶದ ಪ್ರತಿ ಪ್ರಜೆಯು ಸಂವಿಧಾನದ ಚೌಕಟ್ಟಿನಲ್ಲಿ ಸಮಾನರು, ಹಲವಾರು ದೇಶದ ಸಂವಿಧಾನಗಳನ್ನು ಅಧ್ಯಯನ ನಡೆಸಿ ಜನತೆಯ ಸಾರ್ವಭೌಮತೆ, ಪ್ರಜಾತಾಂತ್ರಿಕ ಪ್ರಾಧ್ಯಾನ್ಯತೆ, ಕಠಿಣ-ತೆ ಮತ್ತು ಮೃದುತ್ವದ ಸಮ್ಮಿಲನ, ಸಮಾಜವಾದ, ಜಾತ್ಯಾತೀತತೆ, ಮೂಲಭೂತ ಹಕ್ಕು ಮತ್ತು ಕರ್ತವ್ಯಗಳು ಹೀಗೆ ದೇಶದ ನಡೆ, ನುಡಿ ಜೀವನ ಶೈಲಿ ಅನುಗುಣವಾಗಿ ಸಂವಿಧಾನದ ಪ್ರತಿ ಕಲಂಗಳನ್ನು ರಚಿಸಲಾಗಿದೆ.

ಇಂತಹ ಸಂವಿಧಾನದ ಆಶಯಗಳನ್ನೊತ್ತ ಎರಡು ಟ್ಯಾಬ್ಲೋಗಳು ಸಾಗರದಾದ್ಯಂತ ಸಂಚರಿಸಿ ಸಂವಿಧಾನ ಮತ್ತು ಐಕ್ಯತಾ ಜಾಥಾ ನಡೆಸುತ್ತಾ ಹೊಸನಗರ ತಾಲ್ಲೂಕನ್ನು ಪ್ರವೇಶಿಸಿತು.

# ಹೆತ್ತ ಮಗು ಕೊಲೆಗೈದು ಸಾವಿನ ಹಾದಿ ಹಿಡಿದ ತಾಯಿ



ಕಲಬುರಗಿ: 2 ವರ್ಷದ ಕಂದಮ್ಮಳನ್ನ ಕೊಲೆ ಮಾಡಿ ನೇಣು ಹಾಕಿ, ತಾಯಿ ಕೂಡ ನೇಣಿಗೆ ಶರಣಾದ ಘಟನೆ ಕಲಬುರಗಿ ಜಿಲ್ಲೆಯ ಚಿಂಚೋಳಿ ತಾಲ್ಲೂಕಿನ ಮರಪಳ್ಳಿ ಗ್ರಾಮದಲ್ಲಿ ನಡೆದಿದೆ.

ಶಿವಲೀಲಾ (23) ವರ್ಷಿತಾ (2) ನೇಣಿಗೆ ಶರಣಾದ ತಾಯಿ-ಮಗಳು. ಶಿವಲೀಲಾ ಚಿಂಚೋಳಿ ತಾಲ್ಲೂಕಿನ ಕೆರೋಳ್ಳಿ ಗ್ರಾಮದ ನಿವಾಸಿಯಾಗಿದ್ದು, ಮೂರು ವರ್ಷದ ಹಿಂದೆ ಮರಪಳ್ಳಿ ಗ್ರಾಮದ ಆನಂದ ಜೊತೆ ಮದುವೆಯಾಗಿದ್ದಳು. ಆದರೆ ನಿನ್ನೆ ಸಂಜೆ ನಿವಾಸದಲ್ಲಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಶಿವಲೀಲಾ ಮದುವೆಯಾದ ಬಳಿಕ ಗಂಡ, ಅತ್ತೆ ವಿರುದ್ಧ ಕಿರುಕುಳ ಆರೋಪ ಮಾಡಿದ್ದರು. ಗಂಡ, ಅತ್ತೆಯ ಕಿರುಕುಳಕ್ಕೆ ತವರು ಮನೆಗೆ ಶಿವಲೀಲಾ ಬಂದಿದ್ದಳು. ಎರಡು ದಿನದ ಹಿಂದೆಯಷ್ಟೇ ಮತ್ತೆ ಶಿವಲೀಲಾ ಗಂಡನ ಮನೆ ಸೇರಿದ್ದಳು. ಆದರೆ ಅಲ್ಲಿ ಮಗುವಿನೊಂದಿಗೆ ನೇಣಿಗೆ ಶರಣಾಗಿದ್ದಾಳೆ. ಚಿಂಚೋಳಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ಶರಣರು ಕಂಡ ಶಿವ ಪ್ರವಚನ ಮಾಲೆ

ಬೆಳಗಾವಿ: ಪಂಥ ಬಾಳೆಕುಂದ್ರೀ ಪ್ರಜಾಪಿತ ಬ್ರಹ್ಮಾ ಕುಮಾರಿ ಈಶ್ವರೀಯ ವಿಶ್ವವಿದ್ಯಾಲಯದ ವತಿಯಿಂದ ಶರಣರು ಕಂಡ ಶಿವ ಪ್ರವಚನ ಮಾಲೆ ಉದ್ಘಾಟನಾ ಕಾರ್ಯಕ್ರಮ ಏರ್ಪಪಡಿಸಲಾಗಿತ್ತು.

ಉದ್ಘಾಟನಾ ಭಾಷಣದಲ್ಲಿ 15 ದಿನಗಳ ಕಾಲ ಪ್ರವಚನ ಮಾಲೆ ಕಾರ್ಯಕ್ರಮ ನಡೆಸಿಕೊಡಲಿರುವ ಡಾ॥ ಬಸವರಾಜ ರಾಜಋಷಿ, ನಿರ್ದೇಶಕರು, ಬ್ರಹ್ಮಾಕುಮಾ-ರಿಸ್ ಉಪ ವಲಯ ಕೇಂದ್ರ ಹುಬ್ಬಳ್ಳಿ ಇವರು ಮಾತನಾಡುತ್ತ ; ತನ್ನನ್ನು ತಾನು ಅರಿತರೆ ಶರಣನಾಗುತ್ತಾನೆ, ಇಂದು ವಿಜ್ಞಾನದ ಮೂಲಕ ಸಾಧನೆ ಸಾಧಿಸಿ ಪ್ರಕೃತಿ ಹಾಗೂ ಮಾನವನ ಸುಖ ಸಾಧನೆಗಳ ಅವಿವಿಷ್ಕಾರಗಳಿಂದ ದೇಹ ಅಭಿಮಾನಿ ಆಗಿದ್ದಾನೆ. ಜಾತಿ, ಅಧಿಕಾರ, ಅಂತಸ್ತಿಗೆ ಶರಣರ ಕಾಲದಲ್ಲಿ ಇಪ್ಪಿಗೆ ಇರಲಿಲ್ಲ. ಜೀವನ ಆಚಾರದ ಮೂಲಕ ಅನುಭವ ಮಂಟಪದ ಅನುಭಾವವನ್ನು ನೀಡಿದ್ದಾರೆ. ವಚನಗಳು ಸರ್ವಕಾಲಿಕ ಮಾರ್ಗದರ್ಶನ ನೀಡುವ ಸಾಧನೆಗಳಾಗಿದ್ದವು. ಪರಸ್ಪರ ಸಹೋದರ ಭಾವನಮ್ಮ ಧರ್ಮ, ವಿಶ್ವ ಶಾಂತಿಗಾಗಿ ಭಾರಈಯರು ಪ್ರಯತ್ನ ಪಡುತ್ತಿರುವ ಸಾತ್ವಿಕ ಗುಣ ಹೊಂದಿರುವ ಆಧ್ಯಾತ್ಮಿಕ ದೇಶವಾಗಿದೆ. ಚೇತನ ಶಕ್ತಿ ಆತ್ಮ ಜ್ಞಾನವನ್ನು ವೈಜ್ಞಾನಿಕವಾಗಿ ತಿಳಿದುಕೊಳ್ಳುವ ಕಾಲ ಬಂದಿದೆ. ಶರಣರು ಯಾವ ಶ್ರೇಷ್ಠ ಜ್ಞಾನ, ಜೀವನ ಅನುಭವಗಳ ಸ್ಮರಣೆ, ವಿಶ್ವೇಶ್ವರ ಪರಮಾತ್ಮನ ಸತ್ಯ ಪರಿಚಯ, ದಿವ್ಯ ಕರ್ತವ್ಯ ಹಾಗೂ ಸೃಷ್ಟಿ ನಾಟಕದ ರಹಸ್ಯಗಳ ಬಗ್ಗೆ ತಿಳಿಯಲು ಹೆಚ್ಚಿನ ಸಂಖ್ಯೆಯಲ್ಲಿ ಪ್ರತಿದಿನ ಸಂಜೆ 6:30 ರಿಂದ 7:30 ರವರೆಗೆ ಆಗಮಿಸಿಲು ವಿಜ್ಞಾಪಿಸಿದರು.

ಪ್ರಸ್ತಾವಿಕವಾಗಿ ಮಾತನಾಡಿದ ರಾ-ಜಯೋಗಿನಿ ಬ್ರಹ್ಮಾಕುಮಾರಿ ಪ್ರತಿಭಾ ಅಕ್ಕನವರು ಮಾತನಾಡುತ್ತಾ ಈಶ್ವರೀಯ ವಿಶ್ವ ವಿದ್ಯಾಲಯದ ಸ್ಥಾಪನೆ ಕಾರ್ಯವೈಖರಿ ಮಾನವರು ದೈವತ್ವ ಪಡೆಯುವ ವಿಶ್ವ ಹಾಗೂ ಜೀವನದ ಅವಶ್ಯಕತೆಗಳನ್ನು ಪೂರೈಸುತ್ತಾ ವಿಶ್ವದ 140 ದೇಶದಲ್ಲಿ ನಡೆಯುತ್ತಿರುವ ವಿಶ್ವ ನವ ನಿರ್ಮಾಣದ ಕಾರ್ಯ ವಿವರಿಸಿದರು.

ಮುಖ್ಯ ಅತಿಥಿಗಳಾಗಿ ಆಗಮಿಸಿದ ನಿವೃತ್ತ ಪ್ರಾದೇಶಿಕ ಆಯುಕ್ತರಾದ ಶ್ರೀ. ಎಂ. ಜಿ. ಹಿರೇಮಠರವರು ಮಾತನಾಡಿ ಭಾರತ ದೇಶ ಹಿಂಸೆಯನ್ನು ಡೆಯುವ ಆಧ್ಯಾತ್ಮಿಕ ದೇಶವಾಗಿದೆ. ಸರ್ವ ಧರ್ಮ ದೇಶಗಳ ಸಮ್ಮೇಳನ ಹೊಂದಿದ ದೇಶದಲ್ಲಿ ಸನ್ಯಾಸಿಗಳು, ಸುಸಂಕೃತರು, ಸಹಿಷ್ಣುಗಳಗಳನ್ನು ಹೊಂದಲು ಈ ರೀತಿಯ ಪ್ರವಚನಗಳು ಅವಶ್ಯಕ ಎಂದರು.




ಶ್ರೀ. ಹಿರೇಮಠ, ಕೆ ಎ ಎಸ್ ನಿವೃತ್ತ ಅಧಿಕಾರಿಗಳು ಮಾತನಾಡಿ ಪಂಥ ನಗರದ ಭಾಗ್ಯ ಇಂದು ಉದಯಿಸಿದೆ. ಸರ್ವರು ಈ ಕಾರ್ಯಕ್ರಮದ ಳಾಬ ಪಡೆಯಬೇಕು ಲಾಭ ಪಡೆಯಬೇಕು ಎಂದು ವಿನಂತಿಸಿದರು.

ರಾಜಯೋಗಿಸಿ ಬ್ರಹ್ಮಾಕುಮಾರಿ ಪ್ರಭಾ ಅಕ್ಕನವರು ಬೈಲಹೊಂಗಲ ಸೇವಾಕೇಂದ್ರದ ಸಂಚಾಲಕರು ಮಾತನಾಡಿ ಸರ್ವರು ಪರಮಾತ್ಮನ ಪರಿಚಯ ಪಡೆದು ದಿವ್ಯ ನೇತ್ರದ ಮೂಲಕ ಆಧ್ಯಾತ್ಮಿಕ ಸವಿರುಚಿಂ-ಯನ್ನು ಪ್ರವಚನ ಮಾಲೆಯ ಮುಖಾಂತರ ಪಡೆಯಲು ವಿನಂತಿಸಿದರು.

ಕಾದರವಳ್ಳಿ ಮಸೀದಿ ಮುಖ್ಯ ಗುರುಗಳಾದ ಶ್ರೀ ಹಜರತ್ ಮೀರ್ ಸಾಬ್ ಮುಜಾವರ ಮಾತನಾಡಿ ಹಲವಾರು ಶರಣರು ಭಾರತದಲ್ಲಿ ಜಾತಿ, ಮತ, ಪಂಥ, ದೇಶ ಅರಿವಿಲ್ಲದೆ ಬದುಕಿ ಜಗತ್ತಿಗೆ ಮಾರ್ಗದರ್ಶನ ನೀಡಿದರು. ಮಾನವನಿಗೆ ಸದ್ಗುಣ ತೆಗೆದುಕೊಳ್ಳಲು ಸಾಧ್ಯವಾಗುತ್ತಿಲ್ಲ. ಹುಟ್ಟು ಸಾವು ನಡುವಿನ ಜೀವನ ಪ್ರೀತಿ ಸಹನೆಯಿಂದ ಬಾಳಬೇಕು. ಪ್ರೀತಿಸುವುದೇ ನಿಜವಾದ ಧರ್ಮ ಎಂದರು.

ಅವಧೂತ ಘಾಳೇಶ್ವರ ಮಠದ ಶ್ರೀ ಚಿದಾನಂದ ಮಹಾಸ್ವಾಮಿಗಳು ಮಾತನಾಡಿ ಶರಣರು ಕಂಡ ಶಿವ ಪ್ರವಚನ ಮಾಲೆ ಕಾರ್ಯಕ್ರಮ ನಿರ್ವಿಘ್ನವಾಗಿ ಸಾಗಲಿ ಎಂದು ಆಶೀರ್ವಸಿದರು.

ಪ್ರಜಾಪಿತ ಬ್ರಹ್ಮಾಕುಮಾರಿ ವಿಶ್ವ ವಿದ್ಯಾಲಯದ ಮುಖ್ಯ ಸಂಚಾಲಕರು ರಾಜಯೋಗಿನಿ ಅಂಬಿಕಾ ಅಕ್ಕನವರು ಮಾತನಾಡಿ ಸ್ವತಃ ಪರಮಾತ್ಮನೇ ಧರೆಗೆ ಅವತರಿಸಿ ಈಶ್ವರೀಯ ವಿಶ್ವ ವಿದ್ಯಾಲಯ ಸ್ಥಾಪನೆ ಮಾಡಿದ್ದಾರೆ. ಇಲ್ಲಿಯ ಜ್ಞಾನ ಯೋಗ ಸೇವೆಯ ಮಹತ್ವವನ್ನು ಅರಿತು ಶರಣರು ಕಂಡ ಶಿವನನ್ನು ಅರಿಯಲು ಪ್ರೇ-ರಿಪಿಸಿದರು.

ಶ್ರೀ ರಾಮಪ್ಪ ಆ ಹಟ್ಟಿ ನಿವೃತ್ತ ಕೆ ಎ ಎಸ್ ಅಧಿಕಾರಿಗಳು, ಅಧ್ಯಕ್ಷರು ಮಾಜಿ ಸೈನಿಕರ ಕಲ್ಯಾಣ ಸಂಘ ಪಂತನಗರ ಶ್ರೀ ಎಸ್ ಎನ್ ಹಿರೇಮಠ ನಿವೃತ್ತ ಉಪನ್ಯಾಶಕರು, ಅಧ್ಯಕ್ಷರು ಡಾ॥ ಸರ್ವಪಲ್ಲಿ ರಾಧಾಕೃಷ್ಣ ಗುರು ಬಳಗ ಪಂತನಗರ, ಶ್ರೀ ಎಸ್. ಬಿ. ದೇಯನ್ನವರ ನಿವೃತ್ತ ಮುಖ್ಯ ಮುಖ್ಯೋಪಾಧ್ಯಾಯರು, ಅಧ್ಯಕ್ಷರು ಶಿವ ಮಂದಿರ ಕಮಿಟಿ ಪಂತನಗರ, ಶ್ರೀಮತಿ. ಗುಲಾಬಿ ಕೋಲ್ಕಾರ ಅಧ್ಯಕ್ಷರು ಗ್ರಾಮ ಪಂಚಾಯತ ಬಾಳೇಕುಂದ್ರಿ, ಶ್ರೀ ಮಹಾಂತೇಶ ವಿ. ಹಿರೇಮಠ ನಿವೃತ್ತ ಕಾರ್ಯನಿರ್ವಾಹಕ ಅಭಿಯಂತರು, ಶ್ರೀ. ವೈ ಎಲ್ ಮುರಾಳ ನಿವೃತ್ತ ಅಧಿಕಾರಿಗಳು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ಕಾರ್ಯಕ್ರಮದಲ್ಲಿ ಭಾಗವಹಿಸಿದ ಗಣ್ಯರನ್ನು ಶ್ರೀ ನಾಗಪ್ಪನವರು ಸ್ವಾಗತಿಸಿದರು. ಬ್ರಹ್ಮಾಕುಮಾರಿ ಅಕ್ಕಮ್ಮರವರು ನಿರೂಪಿಸಿ ವಂದಿಸಿದರು

# ಅರಣ್ಯ ವೀಕ್ಷಕರ ಹುದ್ದೆ: ತಾತ್ಕಾಲಿಕ ಆಯ್ಕೆ ಪಟ್ಟಿ ಪ್ರಕಟ– ಆಕ್ಷೇಪಣೆ ಆಹ್ವಾನ

ಬೆಳಗಾವಿ: ಅರಣ್ಯ ಇಲಾಖೆಯ ಬೆಳಗಾವಿ ವೃತ್ತಕ್ಕೆ ಸಂಬಂಧಿಸಿದಂತೆ ಅಧಿಸೂಚಿಸಲಾದ 20 ಅರಣ್ಯ ವೀಕ್ಷಕರ ಹುದ್ದೆಗಳ ತಾತ್ಕಾಲಿಕ ಆಯ್ಕೆ ಪಟ್ಟಿಯನ್ನು ಪ್ರಕಟಿಸಲಾಗಿರುತ್ತದೆ ಎಂದು ಬೆಳಗಾವಿ ವೃತ್ತದ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಹಾಗೂ ಆಯ್ಕೆ ಪ್ರಾಧಿಕಾರ ಇವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವೃಂದ ಮತ್ತು ನೇಮಕಾತಿ ನಿಯಮ ಹಾಗೂ ಅಧಿಸೂಚನೆಯಲ್ಲಿನ ಷರತ್ತುಗಳನ್ವಯ ದೈಹಿಕ ತಾಳ್ವಿಕೆ ಪರೀಕ್ಷೆ [Physical Endurance Test], ದೈಹಿಕ ಕಾರ್ಯ ಸಮರ್ಥತೆ ಪರೀಕ್ಷೆ [Physical Efficiency Test] ಹಾಗೂ ದೇಹ ದಾರ್ಢ್ಯತೆ ಪರೀಕ್ಷೆ [Physical Standard Test] ಗಳಿಗೆ ಮೆರಿಟ್ ಹಾಗೂ ನೇರ ಮತ್ತು ಸಮತಳ ಬಿಂದುಗಳ ಅನುಸಾರ ಅರ್ಹತೆ ಪಡೆದ ಅಭ್ಯರ್ಥಿಗಳ 1:20 (ಹುದ್ದೆ:ಅಭ್ಯರ್ಥಿ) ತಾತ್ಕಾಲಿಕ ಅರ್ಹತಾ ಪಟ್ಟಿಯನ್ನು ಇಲಾಖೆಯ ಅಂತರ್ಜಾಲ https://aranya.gov.in/ ದಲ್ಲಿ ನೇಮಕಾತಿ (Recruitment) ಶೀರ್ಷಿಕೆಯಡಿ ಪ್ರಕಟಿಸಲಾಗಿರುತ್ತದೆ.

ಇದೇ ರೀತಿ ಪ್ರತೀ ಪ್ರವರ್ಗದಲ್ಲಿ ತಾತ್ಕಾಲಿಕವಾಗಿ ಆಯ್ಕೆಯಾಗಿರುವ ಕೊನೆಯ ಅಭ್ಯರ್ಥಿಯು ಗಳಿಸಿರುವ ಅಂಕಗಳ ಶೇಕಡವಾರು ಮಾಹಿತಿಯ ವಿವರವನ್ನು ಪ್ರಕಟಿಸಲಾಗಿದೆ.

ಈ ಕುರಿತು ಯಾವುದಾದರೂ ಆಕ್ಷೇಪಣೆ ಇದ್ದಲ್ಲಿ ಪೂರಕ ದಾಖಲಾತಿಗಳೊಂದಿಗೆ ಸ್ಪಷ್ಟ ರೀತಿಯಲ್ಲಿ ಆಕ್ಷೇಪಣೆಯನ್ನು ವಿವರಿಸಿ ಇ–ಮೇಲ್ "belagavicircle@gmail.com"/ ಸ್ಪೀಡ್ ಪೋಸ್ಟ್/ರಿಜಿಸ್ಟರ್ ಪೋಸ್ಟ್ ಮೂಲಕ ಈ ಕಛೇ–ರಿಗೆ ದಿನಾಂಕ: 20–02–2024 ಸಂಜೆ 5.30 ಗಂಟೆಯೊಳಗೆ ಸಲ್ಲಿಸಬಹುದಾಗಿರುತ್ತದೆ.

ಈ ಮೇಲೆ ನಿಗದಿಪಡಿಸಿದ ದಿನಾಂಕದ ನಂತರ ಮತ್ತು ಈ ಮೇಲಿನ ವಿಧಾನವನ್ನು ಹೊರತುಪಡಿಸಿ ಇತರೆ ವಿಧಾನ/ ಕೊರಿಯರ್ ಮೂಲಕ ಸ್ವೀಕೃತವಾಗುವ ಹಾಗೂ ಅಸ್ಪಷ್ಟ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ ಹಾಗೂ 1:20 (ಹುದ್ದೆ:ಅಭ್ಯರ್ಥಿ) ತಾತ್ಕಾಲಿಕ ಅರ್ಹತಾ ಪಟ್ಟಿಯಲ್ಲಿನ ಅಭ್ಯರ್ಥಿಗಳ ಕುರಿತು ಯಾವುದೇ ಆಕ್ಷೇಪಣೆಗಳು ಯಾ–ರಿಂದಲೂ ಸ್ವೀಕೃತವಾಗದಿದ್ದಲ್ಲಿ, ಸದರಿ ತಾತ್ಕಾಲಿಕ ಪಟ್ಟಿಯನ್ನು ಸರಿಯಾಗಿದೆ ಎಂದು ಪರಿಗಣಿಸಲಾಗುವುದು. ಇನ್ನುಮುಂದೆ, ಈ ಕುರಿತು ಯಾವುದೇ ಆಕ್ಷೇಪಣೆಗಳನ್ನು ಯಾರಿಂದಲೂ ಸ್ವೀಕರಿಸಲಾಗುವುದಿಲ್ಲ ಎಂದು ಬೆಳಗಾವಿ ವೃತ್ತದ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಹಾಗೂ ಆಯ್ಕೆ ಪ್ರಾಧಿಕಾರ ಇವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ನೇರ ಸಂದರ್ಶನ

ಬೆಳಗಾವಿ: ರಾಷ್ಟ್ರೀಯ ಆರೋಗ್ಯ ಅಭಿಯಾನ 15ನೇ ಹಣಕಾಸು ಆಯೋಗದ ಅಡಿಯಲ್ಲಿ ಜಿಲ್ಲೆಯಲ್ಲಿ ಹೊಸದಾಗಿ ಆರಂಭಗೊಂಡ ಸಾರ್ವಜನಿಕ ಆಸ್ಪತ್ರೆ ಅಥಣಿ, ರಾಯಬಾಗ, ರಾಮದುರ್ಗ ಚಿಕ್ಕೋಡಿ ಸವದತ್ತಿ ತಾಲೂಕಿನಲ್ಲಿ Block Level Public Health Unit ಗಳಿಗೆ ಬ್ಲಾಕ್ ಎಪಿಡೆಮಿಯಾಲಾಜಿಸ್ಟ್ ಖಾಲಿ ಇರುವ ಹುದ್ದೆಗಳಿಗೆ ನೇರ ಸಂದರ್ಶದ ಆಯೋಜಿಸಲಾಗಿದೆ.

ಪ್ರಿವೆಂಟಿವ್ ಮತ್ತು ಸೋಶಿಯಲ್ ಮೆಡಿಸಿನ್/ಸಾರ್ವಜನಿಕ ಆರೋಗ್ಯ ಅಥವಾ ಸಾಂಕ್ರಾಮಿಕ ರೋಗಶಾಸ್ತ್ರದಲ್ಲಿ ಸ್ನಾತಕೋತ್ತರ ಪದವಿ/ಡಿಪ್ಲೊಮಾ ಹೊಂದಿರುವ ವೈದ್ಯಕೀಯ ಪದವೀಧರರು (ಉದಾಹರಣೆಗೆ ಎಮ್‌ಡಿ, ಎಮ್‌ಪಿಎಚ್, ಡಿಪಿಎಚ್, ಎಮ್‌ಎಇ ಇತ್ಯಾದಿ) ಅಥವಾ ಸಾರ್ವಜನಿಕ ಆರೋಗ್ಯ/ ಅಪೇಕ್ಷಣೀಯ ಅಥವಾ ಮಾಸ್ಟರ ಆಫ್ ಸೈನ್ಸ ಇನ್ ಲೈಫ್ ಸೈನ್ಸ ಕ್ಷೇತ್ರದಲ್ಲಿ 2 ವರ್ಷ ಅನುಭವ ಹೊಂದಿರುವ ಯಾವುದೇ ವೈದ್ಯಕೀಯ ಪದವೀಧರರು, ಸಾರ್ವಜನಿಕ ಆರೋಗ್ಯ ಕ್ಷೇತ್ರದಲ್ಲಿ 2 ವರ್ಷ ಅನುಭವ ಹೊಂದಿರಬೇಕು.

ಸಾರ್ವಜನಿಕ ಆರೋಗ್ಯ ಕಾರ್ಯಕ್ರಮ ಅಥವಾ ಸಾಂಕ್ರಾಮಿಕ ರೋಗಶಾಸ್ತ್ರದಲ್ಲಿ ಕನಿಷ್ಠ 2 ವರ್ಷಗಳ ಅನುಭವವನ್ನು ಹೊಂದಿದವರಿಗೆ ಮೊದಲ ಆದ್ಯತೆ ಇರುತ್ತದೆ. ವಯೋಮಿತಿ ಸಾಮಾನ್ಯ ಅಭ್ಯರ್ಥಿ–35, ಪ್ರ ವರ್ಗ–1, 2ಎ 2ಬಿ, 3ಎ, 3ಬಿ–38 ಹಾಗೂ ಪ.ಜಾ.ತಿ, ಪ.ಪಂಗಡ–40 ಹೊಂದಿರಬೇಕು. ಮುಕ್ತ ವಿಶ್ವವಿದ್ಯಾಲಯದ ಅಭ್ಯರ್ಥಿಗಳಿಗೆ ಅವಕಾಶವಿರುವದಿಲ್ಲ.

ಆಸಕ್ತರು ಫೆ.20 ರಂದು ಬೆಳಗ್ಗೆ 10 ಘಂಟೆಗೆ ಬೆಳಗಾವಿಯ ಟಿಳಕವಾಡಿ ಲಸಿಕಾ ಕೇಂದ್ರ ಆವರಣದ ಜಿಲ್ಲಾ ಆರೋಗ್ಯ ಮತ್ತು ಕು.ಕ ಅಧಿಕಾರಿಗಳ ಸಭಾಂಗಣದಲ್ಲಿ ಅರ್ಹ ಅಭ್ಯರ್ಥಿಗಳ ವಿದ್ಯಾರ್ಹತೆ ಅನುಭವ, ಇತೀಚಿನ 02 ಭಾವ ಚಿತ್ರ ಹಾಗೂ ಅಗತ್ಯ ಮೂಲ ಹಾಗೂ ನಕಲು ಒಂದು ಸೇಟ್ ದೃಢೀಕೃತ ಪ್ರತಿಗಳು ತೆಗೆದುಕೊಂಡು ನೇರ ಸಂದರ್ಶಕ್ಕೆ ಹಾಜರಾಗುವಂತೆ ಬೆಳಗಾವಿಯ ಜಿಲ್ಲಾ ಸರ್ವೇಕ್ಷಣಾ ಘಟಕದ ಜಿಲ್ಲಾ ಸರ್ವೇಕ್ಷಣಾಧಿಕಾರಿ ತಿಳಿಸಿದ್ದಾರೆ.

# ಬೃಹತ್ ಉದ್ಯೋಗ ಮೇಳ ಫೆ.26, 27 ರಂದು

ಬೆಳಗಾವಿ: ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಹಾಗೂ ಜೀವನೋಪಾಯ ಇಲಾಖೆ, ಕರ್ನಾಟಕ ಕೌಶಲ್ಯ ಅಭಿವೃದ್ಧಿ ನಿಗಮದ ವತಿಯಿಂದ ಬೆಂಗಳೂರಿನ ಅರಮನೆ ಮೈದಾನದಲ್ಲಿ ಫೆಬ್ರುವರಿ 26 ಮತ್ತು 27 ರಂದು ಸನ್ಮಾನ್ಯ ಮುಖ್ಯಮಂತ್ರಿಗಳ ನೇತೃತ್ವದಲ್ಲಿ 'ಯುವ ಸಮೃದ್ಧಿ ಸಮ್ಮೇಳನ'ದ ಅಡಿಯಲ್ಲಿ ರಾಜ್ಯ ಮಟ್ಟದ "ಬೃಹತ್ ಉದ್ಯೋಗ ಮೇಳ"ವನ್ನು ಆಯೋಜಿಸಲಾಗಿದೆ.

ಸದರಿ ಮೇಳದಲ್ಲಿ 500ಕ್ಕೂ ಹೆಚ್ಚು ಉದ್ಯೋಗದಾತರು ಭಾಗವಹಿಸುತ್ತಿದ್ದು, ಯಾವುದೇ ವಿದ್ಯಾರ್ಹತೆಯ ಅಭ್ಯರ್ಥಿಗಳು ನೋಂದಾಯಿಸಿಕೊಂಡು ಸಂದರ್ಶನಕ್ಕೆ ಹಾಜರಾಗಿ ಉದ್ಯೋಗ ಪಡೆಯಬಹುದಾಗಿದೆ.

ಬೃಹತ್ ಉದ್ಯೋಗಮೇಳದಲ್ಲಿ ಭಾಗವಹಿಸಲು ಇಚ್ಛಿಸುವ ಉದ್ಯೋಗಾಕಾಂಕ್ಷಿಗಳು https://skill-connect.kaushalkar.com/ ಗೆ ಭೇಟಿ ನೀಡಿ, ನೋಂದಾಯಿಸಿಕೊಳ್ಳಬಹುದಾಗಿದೆ. ನೋಂದಾಯಿತ ಅಭ್ಯರ್ಥಿಗಳು ಫೆಬ್ರುವರಿ 26 ಮತ್ತು 27 ರಂದು ನೇರವಾಗಿ ಉದ್ಯೋಗಮೇಳದಲ್ಲಿ ಪಾಲ್ಗೊಳ್ಳಬಹುದಾಗಿದೆ.

ಜಿಲ್ಲೆಯ ಎಲ್ಲ ಉದ್ಯೋಗಾಕಾಂಕ್ಷಿಗಳು ನೀಡಿರುವ ಲಿಂಕ್ ಮೂಲಕ ನೋಂದಾಯಿಸಿಕೊಂಡು ಸದರಿ ಬೃಹತ್ ಉದ್ಯೋಗಮೇಳದ ಸದುಪಯೋಗ ಪಡೆಯಬೇಕು ಎಂದು ಜಿಲ್ಲಾ ಕೌಶಲ್ಯಾಭಿವೃದ್ಧಿ ಇಲಾಖೆ ಕೌಶಲ್ಯಾಭಿವೃದ್ಧಿ ಅಧಿಕಾ–ರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ವಿಕಲಚೇತನರು ಸೇರಿದಂತೆ ವಿವಿಧ ಯೋಜನೆಗಳ ಫಲಾನುಭವಿಗಳಿಗೆ ಸೌಲಭ್ಯ ವಿತರಣೆ

ಬೆಳಗಾವಿ: ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಸಚಿವರಾದ ಲಕ್ಷ್ಮೀ ಆರ್. ಹೆಬ್ಬಾಳಕರ ಅವರು ತಮ್ಮ ಗೃಹ ಕಛೇರಿಯಲ್ಲಿ ಬುಧವಾರ(ಫೆ.14) ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆಯ ವಿವಿಧ ಯೋಜನೆಗಳಡಿ 2023–24ನೇ ಸಾಲಿಗೆ ಆಯ್ಕೆಯಾಗಿರುವ ವಿಕಲಚೇತನ ಫಲಾನುಭವಿಗಳಿಗೆ ಸೌಲಭ್ಯಗಳ ಮಂಜೂರಾತಿ ಆದೇಶ ಪ್ರತಿಗಳನ್ನು ಮತ್ತು ಸೌಲಭ್ಯಗಳನ್ನು ವಿತರಿಸಿದರು.



ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪನಿರ್ದೇಶಕರಾದ ಬಸವರಾಜು ಎ.ಎಂ., ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿ ನಾಮದೇವ ಬಿಲ್ಕರ್ ಮತ್ತು ಬೆಳಗಾವಿ ತಾಲೂಕಿನ ವಿಕಲಚೇತನರ ಪುನರ್ವಸತಿ ಕಾರ್ಯಕರ್ತರು ಉಪಸ್ಥಿತರಿದ್ದರು.

**1) ಅಂಗವಿಕಲತೆ ನಿವಾರಣಾ ಶಸ್ತ್ರಚಿಕಿತ್ಸೆಗಾಗಿ ವೈದ್ಯಕೀಯ ಪರಿಹಾರ ಧನ ಯೋಜನೆ**

ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆಯ ಫಲಾನುಭವಿ ಆದ–ರಿತ ಯೋಜನೆಗಳಲ್ಲೊಂದಾದ ವೈದ್ಯಕೀಯ ಪರಿಹಾರ ಧನ ಯೋಜನೆಯಡಿ ಅಂಗವಿಕಲತೆ ನಿವಾರಣಾ ಶಸ್ತ್ರ ಚಿಕಿತ್ಸೆಗಾಗಿ ಗರಿಷ್ಠ ರೂ. 1.00 ಲಕ್ಷಗಳ ವರೆಗೆ ಪರಿಹಾರ ಧನ ಒದಗಿಸಲಾಗುತ್ತಿದ್ದು, ಸರ್ಕಾರಿ ಆಸ್ಪತ್ರೆಗಳಲ್ಲಿ ಶಸ್ತ್ರ ಚಿಕಿತ್ಸೆಗೊಳಗಾದ ಅಥವಾ ಸರ್ಕಾರಿ ಆಸ್ಪತ್ರೆಯಲ್ಲಿ ಶಸ್ತ್ರ ಚಿಕಿತ್ಸೆ ಸೌಲಭ್ಯ ಲಭ್ಯವಿಲ್ಲದಿದ್ದಲ್ಲಿ ಸರ್ಕಾರಿ ಆಸ್ಪತ್ರೆಯವರು ಶಿಫಾರಸ್ಸು ಮಾಡುವ ಪ್ರತಿಷ್ಠಿತ ಖಾಸಗಿ ಆಸ್ಪತ್ರೆಗಳಲ್ಲಿ ಶಸ್ತ್ರಚಿಕಿತ್ಸೆಗೊಳಗಾದ ಫಲಾನುಭವಿಗೆ ಒಟ್ಟಾರೆ ಶಸ್ತ್ರಚಿಕಿತ್ಸೆಗೆ ತಗಲುವ ವೆಚ್ಚಕ್ಕೆ ಗರಿಷ್ಠ ರೂ. 1.00 ಲಕ್ಷಗಳ ವರೆಗೆ ಶಸ್ತ್ರೊಚಿಕಿತ್ಸೆಯ ಬಿಲ್‌ನ್ನು ಸಂಬಂಧಪಟ್ಟ ಆಸ್ಪತ್ರೆಗೆ ನೇರವಾಗಿ ಪಾವತಿಸಲಾಗುತ್ತಿದೆ.

ಸದರಿ ಯೋಜನೆಯಡಿ ಪ್ರಸಕ್ತ 2023–24ನೇ ಸಾಲಿಗೆ ಬೆಳಗಾವಿ ನಗರದ ಕು. ಪ್ರೇಮಾ ಮಹಾಂತೇಶ ಗೌಳಿ, ವಯಸ್ಸು 07 ವರ್ಷ, ಈ ಬಾಲಕಿಯ ಕಾಲು ಬೆರಳು ಮತ್ತು ಕೈ ಬೆರಳುಗಳು ಒಂದಕ್ಕೊಂದು ಹೊಂದಿಕೊಂಡಿದ್ದು, ಕೆ.ಎಲ್.ಇ. ಆಸ್ಪತ್ರೆಗೆ ದಾಖಲಿಸಿ ಶಸ್ತ್ರೊ ಚಿಕಿತ್ಸೆ ಮಾಡಿಸಲಾಗಿದ್ದು, ಶಸ್ತ್ರಚಿಕಿತ್ಸೆಗೆ ತಗುಲಿರುವ ಒಟ್ಟು ಬಿಲ್ ಮೊತ್ತ ರೂ. 1.35 ಲಕ್ಷ ಇದ್ದು, ಇಲಾಖೆಯಿಂದ ಕೆ. ಎಲ್.ಇ. ಆಸ್ಪತ್ರೆಗೆ ರೂ. 1.00 ಲಕ್ಷ ಸಂದಾಯ ಮಾಡಬೇಕಾಗಿದ್ದು, ಪ್ರಸ್ತುತ ಲಭ್ಯವಿರುವ ರೂ. 50 ಸಾವಿರಗಳನ್ನು ಇಲಾಖೆಯಿಂದ ಕೆ.ಎಲ್.ಇ. ಆಸ್ಪತ್ರೆಗೆ ಸಂದಾಯ ಮಾಡಲಾಗುತ್ತಿದ್ದು, ತದನಂತರ ಬಾಕಿ ಇರುವ ರೂ. 50 ಸಾವಿರಗಳನ್ನು ಸಂದಾಯ ಮಾಡಲಾಗುವುದು.

**2) ವಿವಾಹ ಪ್ರೋತ್ಸಾಹಧನ ಯೋಜನೆ :**

ಇಲಾಖೆಯ ಫಲಾನುಭವಿ ಆದ–ರಿತ ಯೋಜನೆಯಾದ ವಿವಾಹ ಪ್ರೋತ್ಸಾಹಧನ ಯೋಜನೆಯಡಿ ವಿಕಲಚೇತನ ಯುವಕ ಅಥ–ವಾ ಯುವತಿಯನ್ನು ವಿವಾಹವಾಗುವ ಸಾಮಾನ್ಯ ವ್ಯಕ್ತಿಗೆ ರೂ. 50,000/–ಗಳ ಪ್ರೋತ್ಸಾಹಧನ ಒದಗಿಸಲಾಗುತ್ತಿದೆ. ಸದರಿ ಮಂಜೂರಾದ ಪ್ರೋತ್ಸಾಹಧನವನ್ನು ಫಲಾನುಭವಿಗಳ ಜಂಟಿ ಬ್ಯಾಂಕ್ ಖಾತೆಯಲ್ಲಿ 5 ವರ್ಷಗಳ ಅವಧಿಗೆ ಭದ್ರತಾ ಠೇವಣಿ ಮಾಡಲಾಗುತ್ತದೆ.

ಪ್ರಸಕ್ತ 2023–24ನೇ ಸಾಲಿಗೆ ಬೆಳಗಾವಿ ಜಿಲ್ಲೆಯ ಈ ಕೆಳಕಾಣಿಸಿದ ಮೂವರು ಫಲಾನುಭವಿಗಳಿಗೆ ತಲಾ ರೂ. 50,000/–ಗಳ ವಿವಾಹ ಪ್ರೋತ್ಸಾಹಧನ ಒದಗಿಸಲಾಗುತ್ತಿದೆ.

1) ಸಾಮಾನ್ಯ ವ್ಯಕ್ತಿ – ಶ್ರೀಮತಿ ಲಕ್ಷ್ಮೀ ಮಲ್ಲಪ್ಪ ಗಾಣಗಿ, ಸಾ: ಕೆ. ಕೆ. ಕೊಪ್ಪ

ವಿಕಲಚೇತನ ವ್ಯಕ್ತಿ – ಶ್ರೀ ಪ್ರವೀಣ ಚನ್ನಮಲ್ಲ ತೇಲಿ, ಸಾ: ಬಾಳೇಕುಂದ್ರಿ ಕೆ. ಹೆಚ್.

2) ಸಾಮಾನ್ಯ ವ್ಯಕ್ತಿ – ಶ್ರೀಮತಿ ಸುಶ್ಮಿತಾ ಬಸವರಾಜ ಪಟ್ಟಣಶೆಟ್ಟಿ, ಸಾ: ಬಡಾಲ ಅಂಕಲಗಿ

ವಿಕಲಚೇತನ ವ್ಯಕ್ತಿ – ಶ್ರೀ ನಾಗರಾಜ ಚಂದ್ರಗೌಡ ಪಾಟೀಲ, ಸಾ: ಬಡಾಲ ಅಂಕಲಗಿ

3) ಸಾಮಾನ್ಯ ವ್ಯಕ್ತಿ – ಶ್ರೀಮತಿ ಕಮಲಾ ಭೀಮಪ್ಪ ಪರಸನಟ್ಟಿ, ಸಾ: ಗಿರಿಯಾಲ ಕೆ. ಎ.

ವಿಕಲಚೇತನ ವ್ಯಕ್ತಿ : ಶ್ರೀ ಗುರುನಾಥ ಚಿನ್ನಪ್ಪ ಕೋಲಕಾರ ಸಾ: ತಾರೀಹಾಳ

4) ಶ್ರವಣದೋಷವುಳ್ಳವರಿಗೆ ಹೊಲಿಗೆ ಯಂತ್ರ ಯೋಜನೆ :

ಶ್ರವಣ ದೋಷವುಳ್ಳ ವಿಕಲಚೇತನ–ರಿಗೆ ಸ್ವಂತ ಉದ್ಯೋಗಕ್ಕಾಗಿ ಹೊಲಿಗೆ ಯಂತ್ರವನ್ನು ಒದಗಿಸಲಾಗುತ್ತಿದ್ದು, ಪ್ರಸಕ್ತ 2023–24ನೇ ಸಾಲಿಗೆ ಸದರಿ ಯೋಜನೆಯಡಿ ಆಯ್ಕೆಯಾದ ಫಲಾನುಭವಿ ಶ್ರೀಮತಿ ಪ್ರಜ್ಞಾ ಎಸ್. ಕೆ. ಸಾ: ಮುತಗಾ ತಾ/ಜಿ: ಬೆಳಗಾವಿ ಇವ–ರಿಗೆ ಹೊಲಿಗೆಯಂತ್ರವನ್ನು ಸಚಿವೆ ಲಕ್ಷ್ಮೀ ಹೆಬ್ಬಾಳಕರ್ ಅವರು ವಿತರಿಸಿದರು.

# ಬೆಳಗಾವಿಯಲ್ಲಿ ಡಾ.ಯಶವಂತ ಸರದೇಶಪಾಂಡೆ ಇವರ ನಾಟಕಗಳ ಪ್ರದರ್ಶನ



ಬೆಳಗಾವಿ: ಅರವಿಂದ ಪಾಟೀಲ್ ಕಲ್ಚರಲ್ ಡಯಾಸ್, ಬೆಳಗಾವಿ ಇವರ ಆಶ್ರಯದಲ್ಲಿ ಡಾ.ಯಶವಂತ ಸರದೇಶಪಾಂಡೆ ಇವರ "ರಾಶಿಚಕ್ರ" ಹಾಗೂ "ಸೂಪರ್ ಸಂಸಾರ" ನಾಟಕಗಳು ನಗರದ ಕನ್ನಡ ಭವನದಲ್ಲಿ ಇದೇ ಶನಿವಾರ 17 ಹಾಗೂ ರವಿವಾರ 18 ರಂದು ಪ್ರತಿ ದಿನ 6:30ಕ್ಕೆ ಪ್ರದರ್ಶನವಾಗಲಿವೆ.

ಗುರು ಇನ್ಸಿಟ್ಯೂಟ್, ಹುಬ್ಬಳ್ಳಿ ತಂಡವು ಈ ರಂಗ ಪ್ರಯೋಗವನ್ನು ನಡೆಸಿಕೊಡಲಿದ್ದು, ಡಾ.ಯಶವಂತ ಸರದೇಶಪಾಂಡೆ ಪ್ರಸ್ತುತಪಡಿಸುವ ಏಕವ್ಯಕ್ತಿ ಹಾಸ್ಯ ರಂಗ ಪ್ರಯೋಗ "ರಾಶಿಚಕ್ರ" ಶನಿವಾರ 17 ರಂದು (ಮೂಲ: ಶರದ ಉಪಾಧ್ಯೆ, ಅನುವಾದ: ವಿವೇಕ ಕಾತರಕಿ) ಅವರದಾಗಿದೆ.

ಇತ್ತೀಚೆಗೆ ತುಂಬಿದ ಸಭಾಗೃಹಗಳಲ್ಲಿ ನಗೆಯ ಸುನಾಮಿ ಎಬ್ಬಿಸಿದ ಹೊಸ ನಾಟಕ "ಸೂಪರ್ ಸಂಸಾರ" ರವಿವಾರ 18 ರಂದು ಪ್ರದರ್ಶನವಾಗಲಿವೆ.


ಈ ನಾಟಕಗಳು ಕುಟುಂಬದೊಂದಿಗೆ ಬಂದು ಆನಂದಿಸಬಹುದಾದ ನಾಟಕಗಳಾಗಿದ್ದು, ಬೆಳಗಾವಿಯ ರಂಗಾಸಕ್ತರು, ನಾಟಕ ಪ್ರೀಯರು ಹೆಚ್ಚಿನ ಸಂಖ್ಯೆಯಲ್ಲಿ ಬರಲು ಅರವಿಂದ ಪಾಟೀಲ್ ಕಲ್ಚರಲ್ ಡಯಾಸ್, ಬೆಳಗಾವಿಯ ಮಮತಾ ಪಾಟೀಲ ಇವರು ಪ್ರಕಟಣೆಯಲ್ಲಿ ಕೋರಿದ್ದಾರೆ.

# ದೇಶದ 40 ಅಗ್ರಶ್ರೇಣಿಯ ಆಭರಣ ತಯಾರಕರು ಭಾಗವಹಿಸುತ್ತಿರುವ "ದಿ ಜ್ಯುವೆಲರಿ ಶೋ" ಪ್ರದರ್ಶನ ಮತ್ತು ಮಾರಾಟ ಉತ್ಸವ

## ಶೆರಟನ್ ಹೋಟೆಲ್ ನಲ್ಲಿ ಫೆ.16 ರಿಂದ 18 ರವರೆಗೆ ಅನಾವರಣಗೊಳ್ಳಲಿದೆ ಆಭರಣ ವೈಭವ

ಬೆಂಗಳೂರು: ಪ್ರೇಮಿಗಳ ದಿನ, ಮದುವೆ, ಶುಭ ಸಮಾರಂಭಗಳಿಗಾಗಿ ನಗರದ ಶೆರಟನ್ ಹೋಟೆಲ್ ನಲ್ಲಿ ಫೆ. 16 ರಿಂದ 18 ರವರೆಗೆ ವೈಭವದ "ದಿ ಜ್ಯುವೆಲರಿ ಶೋ" ಆಭರಣ ಮೇಳ ಆಯೋಜಿಸಲಾಗಿದೆ. ದೇಶದ 40 ಅಗ್ರ ಶ್ರೇಣಿಯ ಆಭರಣ ತಯಾರಕರು ಭಾಗವಹಿಸುತ್ತಿರುವ ವಡವೆ ಪ್ರದರ್ಶನ ಮತ್ತು ಮಾರಾಟ ಉತ್ಸವದಲ್ಲಿ ಗ್ರಾಹಕರ ಅಭಿರುಚಿಗೆ ಒಪ್ಪುವ, ಜಾಗತಿಕ ಗುಣಮಟ್ಟದ ಆಭರಣಗಳು ಗಮನ ಸೆಳೆಯಲಿವೆ.

ಮೇಳಕ್ಕೆ ಚಿತ್ರನಟಿ ನಿಶ್ಚಿಕಾ ನಾಯ್ಡು ಅಪರಾಹ್ನ 12:30ಕ್ಕೆ ಉದ್ಘಾಟಿಸಲಿದ್ದಾರೆ. ಆಭರಣ ಎಂದರೆ ಮಹಿಳೆಯರಿಗೆ ಅಚ್ಚುಮೆಚ್ಚು ಹಾಗೂ ನಂಬಿಕಸ್ತ ಹೂಡಿಕೆಯೂ ಆಗಿದೆ. ಈ ಮೇಳದಲ್ಲಿ ಪ್ರಶಸ್ತಿ ವಿಜೇತ ಹಾಗೂ ಹೆಸರಾಂತ ಆಭರಣ ಮಳಿಗೆಗಳು ಭಾಗವಹಿಸುತ್ತಿವೆ. ಹಳದಿ ಲೋಹ ಖರೀದಿಸಲು ಇದೊಂದು ಉತ್ತಮ ವೇದಿಕೆಯಾಗಿದ್ದು, ಬೆಂಗಳೂರು ನಗರ ಮತ್ತು ಸುತ್ತಮುತ್ತಲಿನ ನಾಗರೀಕರಿಗೆ ಉಜ್ವಲ ಅವಕಾಶವಾಗಿದೆ.




ಈ ಮಹತ್ವದ ಆಭರಣ ಮೇಳವನ್ನು ಗೋಲ್ಡನ್ ಕ್ರೀಪರ್ ಸಂಸ್ಥೆಯ ಜಗದೀಶ ಬಿ.ಎನ್ ಮತ್ತು ಹೇಮಲತಾ ಜಗದೀಶ್ ಆಯೋಜಿಸಿದ್ದಾರೆ. ಹೆಸರಾಂತ ಆಭರಣ ಮಳಿಗೆಗಳು ಭಾಗವಹಿಸಲಿರುವ ಈ ಮೇಳದಲ್ಲಿ ವಿಶೇಷ ವಿನ್ಯಾಸಗಳನ್ನೊಳಗೊಂಡ ಅಂತರರಾಷ್ಟ್ರೀಯ ಗುಣಮಟ್ಟದ ಆಭರಣಗಳ ಪ್ರದರ್ಶನ ಹಾಗೂ ಮಾರಾಟಕ್ಕೆ ವ್ಯವಸ್ಥೆ ಮಾಡಲಾಗಿದೆ. ಆಭರಣ ಮಳಿಗೆಗಳಲ್ಲಿ ಚಿನ್ನ ಮತ್ತು ವಜ್ರಾಭರಣಗಳ ಬಗ್ಗೆ ಗ್ರಾಹಕರಿಗೆ ಎಲ್ಲಾ ರೀತಿಯ ಮಾಹಿತಿ ನೀಡಲು ವ್ಯವಸ್ಥೆ ಮಾಡಲಾಗಿದೆ.

ಖರೀದಿದಾರರು ಹಳೇ ಚಿನ್ನವನ್ನು ಬದಲಾಯಿಸಿಕೊಳ್ಳಲು ಅವಕಾಶ ಕಲ್ಪಿಸಲಾಗಿದೆ.

ಮೇಳದಲ್ಲಿ ಬೆಂಗಳೂರಿನ ಅನನ್ಯ ಜುವೆಲ್ಸ್, ಎಂ.ಪಿ. ಸ್ವರ್ಣ ಮಹಲ್, ನೀಲಕಂಠ, ಪಿ.ಎಂ.ಜೆ ಪ್ರಕಾಶ್ ಜುವೆಲರ್ಸ್, ಸಿಂಹ ಜುವೆಲ್ಲರ್ಸ್, ಶ್ರೀ ಗಣೇಶ್ ಡೈಮಂಡ್ಸ್, ವರಶ್ರೀ, ಕಿಯಾ, ಡಯಾಮ್ಸ್, ಡಿ.ಆರ್. ಎನ್. ವಿವಾಂತ್, ವಿತ್ರಾಗ್, ಶ್ರೀ ಕುಮಾರನ್ ತಂಗಮಳಿಗೈ, ವಂಡರ್ ಡೈಮಂಡ್ಸ್, ರೂಪಂ ಸಿಲ್ವರ್, ಮೈ ಸಿಲ್ವರ್, ಸ್ಯಾಂಚೀಸ್, ಸಿಲ್ವರ್ ಗ್ಯಾಲರಿ, ಮದನ್ ಜೇಮ್ಸ್, ನಿಸ್ವಾದಿತ, ಸ್ಟೈಲ್ ಔರ್, ಹರ್ ಹಮ್, ಔರಾ, ಶ್ರೀಹರಿ ಡೈಯಾಜಮ್ಸ್, ಗೋಲ್ಡ್ ಕ್ಯಾರೇಟ್, ಶ್ರೀ ಗೋಲ್ಡ್ ಪಾರಮನಿ, ಮೆಹ್ತಾ ಬ್ರದರ್ಸ್, ಲೈಮ್ ಲೈಟ್ ಡೈಮಂಡ್ಸ್, ಸ್ಯಾಂಜಿನಿ, ಕೊಹೀರಾ, ಬಿ.ಎನ್.ಆರ್. ಡೈಮಂಡ್ಸ್, ಸ್ರಸ್ಟ, ನಿತ್ಯಾಸ್, ಸುನಿಲ್ ಜುವೆಲರ್ಸ್, ಶ್ರೀ ಜುವೆಲ್ಸ್, ಬನೇತಿ ಎಕ್ಸ್ ಪೋರ್ಟ್ಸ್, ಪನ್ನ ಜುವೆಲರ್ಸ್, ಕಿಯಾಮ ಕಲೆಕ್ಷನ್ಸ್ ಭಾಗವಹಿಸಲಿವೆ.

# ಮಹಿಳೆ ಮೇಲೆ ಪಿಎಸ್‌ಐ ಹಲ್ಲೆ: ಆಸ್ಪತ್ರೆಗೆ ದಾಖಲು



ಮಂಡ್ಯ: ವಿಚಾರಣೆ ನೆಪದಲ್ಲಿ ಮಹಿಳೆ ಮೇಲೆ ಪೊಲೀಸರು ಹಲ್ಲೆ ನಡೆಸಿ ದರ್ಪ ಮೆರೆದಿರುವ ಅಮಾನವೀಯ ಘಟನೆ ಮಂಡ್ಯದಲ್ಲಿ ನಡೆದಿದ್ದು ಮಹಿಳೆಗೆ ಗಂಭೀರ ಗಾಯಗಳಾಗಿವೆ. ಗಾಯಾಳು ಮಹಿಳೆ ಮಂಡ್ಯ ಮಿಮ್ಸ್ ಆಸ್ಪತ್ರೆಗೆ ದಾಖಲಾಗಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ಮಂಡ್ಯ ಪೂರ್ವ ಠಾಣೆ PSI ಅಯ್ಯನಗೌಡ ಎಂಬುವವರು ಮಂಡ್ಯ ನಗರದ ರೂಪಾದೇವಿ ಎಂಬುವರ ಮೇಲೆ ಹಲ್ಲೆ ನಡೆಸಿದ್ದಾರೆ ಎಂಬ ಗಂಭೀರ ಆರೋಪ ಕೇಳಿ ಬಂದಿದೆ. ರೂಪಾ ಅವರಿಗೆ ಸೇರಿದ್ದ ಹಸು ಮಹಿಳಾ ಪೇದೆ ಸ್ಕೂಟರ್ಗೆ ಅಡ್ಡ ಬಂದಿತ್ತು. ಈ ವೇಳೆ ಮಹಿಳಾ ಪೇದೆ ವನಜಾಕ್ಷಿ ನಿಯಂತ್ರಣ ತಪ್ಪಿ ಗಾಡಿಯಿಂದ ಬಿದ್ದು ಗಾಯಗೊಂಡಿದ್ದರು. ಚಿಕಿತ್ಸೆ ಪಡೆದ ಬಳಿಕ ರೂಪಾ ಅವರು ತಮಗೆ ಪರಿಹಾರ ನೀಡುವಂತೆ ವನಜಾಕ್ಷಿ ಒತ್ತಡ ಹಾಕಿದ್ದರು. ಹಣ ನೀಡದಿದ್ದಕ್ಕೆ ವಿಚಾರಣೆ ನೆಪದಲ್ಲಿ ಪೊಲೀಸ್ ಠಾಣೆಗೆ ಕರೆಸಿ ಹಲ್ಲೆ ನಡೆಸಲಾಗಿದೆ. ಮಂಡ್ಯದ ಪೂರ್ವ ಠಾಣೆ ಪಿಎಸ್‌ಐ ಅಯ್ಯನಗೌಡ ವಿರುದ್ಧ ಹಲ್ಲೆ ಮಾಡಿರುವ ಗಂಭೀರ ಆರೋಪ ಕೇಳಿ ಬಂದಿದೆ. ಇನ್ನು ಪೊಲೀಸರ ಥಳಿತದಿಂದ ಮಹಿಳೆಗೆ ಗಂಭೀರ ಗಾಯಗಳಾಗಿವೆ. ಅಧಿಕಾರ ದುರುಪಯೋಗಪಡಿಸಿಕೊಂಡು ಮಹಿಳೆ ಕೈ ಕಾಲಿಗೆ ಹಿಗ್ಗಾಮುಗ್ಗ ಥಳಿಸಿರುವ ಆರೋಪ ಕೇಳಿ ಬಂದಿದೆ. ಗಾಯಾಳು ಮಹಿಳೆಯನ್ನು ಮಂಡ್ಯ ಮಿಮ್ಸ್ ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ಕೊಡಿಸಲಾಗುತ್ತಿದೆ. ಮತ್ತೊಂದೆಡೆ ಹಲ್ಲೆಗೊಳಗಾದ ಮಹಿಳೆಯ ನೆರವಿಗೆ ಧಾವಿಸಿದ ಹೋರಾಟಗಾರರು ಇಂದು ಪೊಲೀಸರ ವಿರುದ್ಧ ಪ್ರತಿಭಟನೆ ನಡೆಸಲು ನಿರ್ಧಾರ ಮಾಡಿದ್ದಾರೆ.

# ಯುವಕ ಸಾವು

ಬೆಳಗಾವಿ: ಟಿಪ್ಪರ ಹಾಗೂ ಬೈಕ್ ನಡುವೆ ಡಿಕ್ಕಿ ಸಂಭವಿಸಿ ಬೈಕ್ ಸವಾರ ಸ್ಥಳದಲ್ಲೇ ಸಾವನ್ನಪ್ಪಿರುವ ಗಟನೆ ಅಥಣಿ ಪಟ್ಟಣದ ಜತ್ ರಸ್ತೆಯ ಹೊಸೆಟ್ಟಿ ಕ್ರಾಸ್ ಬಳಿ ನಡೆದಿದೆ.

ಈ ಅಪಘಾತದಲ್ಲಿ ಸಾವನ್ನಪ್ಪಿದು ಯುವಕನನ್ನು ನಾಗನೂರು ಪಿಕೆ ಗ್ರಾಮ ದರ್ಶನ ಶಿವಾನಂದ ಕಾಂಬಳೆ ಎಂದು ಗುರುತಿಸಲಾಗಿದೆ.

ಈತ ನಾಗನೂರು ಪಿಕೆ ಗ್ರಾಮದಿಂದ ಬೈಕ್ ಮೇಲೆ ಕೆಲಸಕ್ಕಾಗಿ ತೆರಳುವಾಗ ಟಿಪ್ಪರ್ ಡಿಕ್ಕಿ ಹೊಡೆದೆ.

ಟಿಪ್ಪರ ಯುವಕನ ತಲೆಯ ಮೇಲೆ ಹರಿದಿರುವದರಿಂದ ದರ್ಶನ ಸ್ಥಳದಲ್ಲೇ ಸಾವನ್ನಪ್ಪಿದ್ದಾನೆ.

ಈ ಕುರಿತು ಅಥ–ಣಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ಸಾರಾಯಿ ಅಂಗಡಿಗೆ ಅನುಮತಿ ನೀಡದಂತೆ ಒತ್ತಾಯಿಸಿ ಮನವಿ

ಹುಕ್ಕೇರಿ : ತಾಲೂಕಿನ ಕಮತನೂರ ಗೇಟ್‌ನಲ್ಲಿ ಸಾರಾಯಿ (ಮದ್ಯದಂಗಡಿ) ಅಂಗಡಿ ತೆರೆಯಲು ಅನುಮತಿ ನೀಡಬಾರದು ಎಂದು ಆಗ್ರಹಿಸಿ ಡಾ.ಬಿ.ಆರ್.ಅಂಬೇಡ್ಕರ ಜನಜಾಗೃತಿ ವೇದಿಕೆಯ ಮಹಿಳಾ ಘಟಕದ ಸದಸ್ಯೆಯರು ಅಬಕಾರಿ ಇಲಾಖೆ ಕಚೇರಿ ಎದುರು ಪ್ರತಿಭಟನೆ ನಡೆಸಿದರು.

ಸಂಕೇಶ್ವರ ಅಬಕಾರಿ ನಿರೀಕ್ಷಕರ ಕಚೇರಿ ಬಳಿ ಜಮಾಯಿಸಿದ ನೂರಾರು ಮಹಿಳೆಯರು, ಯಾವುದೇ ಕಾರಣ–ಕ್ಕೂ ಕಮತನೂರ ಪ್ರದೇಶದಲ್ಲಿ ಸಾರಾಯಿ ಅಂಗಡಿ ಆರಂಭಿಸಲು ಬಿಡುವುದಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು. ಬಳಿಕ ಚಿಕ್ಕೋಡಿ ಅಬಕಾರಿ ಉಪ ಆಯುಕ್ತರ ಕಚೇರಿಗೆ ತೆರಳಿ ಮನವಿ ಸಲ್ಲಿಸಿದರು.





ಕೋಚರಿ ಗ್ರಾಮದಲ್ಲಿರುವ ಸಾರಾಯಿ ಅಂಗಡಿಯನ್ನು ಕಮತನೂರ ಗೇಟ್‌ಗೆ ಸ್ಥಳಾಂತರಿಸಲು ಅಬಕಾರಿ ಇಲಾಖೆ ಅಧಿಕಾರಿಗಳು ಮುಂದಾಗಿದ್ದಾರೆ. ಇದ–ರಿಂದ ಈ ಪ್ರದೇಶದ ಸಾಮಾಜಿ–ಕ ಹದಗೆಡುವ ಆತಂಕ ಎದುರಾಗಿದೆ. ಅದರಲ್ಲೂ ಯುವಕರು ಸಾರಾಯಿ ಚಟಕ್ಕೆ ಅಂಟಿಕೊಂಡು ಅನೇಕ ಕುಟುಂಬಗಳು ಹಾಳಾಗುವ ಸಾಧ್ಯತೆ ಹೆಚ್ಚಾಗಿದೆ. ಮಹಿಳೆಯರ ಮಾನಸಿಕ ನೆಮ್ಮದಿಗೆ ಭಂಗ ತರುವ ಸಾರಾಯಿ ಅಂಗಡಿಯನ್ನು ಇಲ್ಲಿ ಆರಂಭಿಸದಂತೆ ತಡೆಹಿಡಿಯಬೇಕು ಎಂದು ಪ್ರತಿಭಟನಾಕಾರರು ಆಗ್ರಹಿಸಿದರು.

ರಾಜಕೀಯ ಒತ್ತಡ, ಪ್ರಭಾವ ಹಾಗೂ ಹಣದ ಆಸೆಗೆ ಬಲಿಯಾಗಿ ಕಮತನೂರ ಗೇಟ್‌ನಲ್ಲಿ ಸಾರಾಯಿ ಅಂಗಡಿ ಆರಂಭಿಸಿದರೆ ಅಬಕಾರಿ ಕಚೇರಿ ಎದುರು ಅನಿರ್ಧಿಷ್ಟಾವಧಿ ಧರಣಿ ಸತ್ಯಾಗ್ರಹ ನಡೆಸಲಾಗುವುದು ಅಬಕಾರಿ ಇಲಾಖೆ ಅಧಿಕಾರಿಗಳಿಗೆ ಸಲ್ಲಿಸಿದ ಮನವಿಯಲ್ಲಿ ಮಹಿಳೆಯರು ಎಚ್ಚರಿಸಿದ್ದಾರೆ.

ಗೌರವ ಅಧ್ಯಕ್ಷ ಮಲ್ಲಿಕಾರ್ಜುನ ರಾಶಿಂಗೆ, ಜಿಲ್ಲಾ ಅಧ್ಯಕ್ಷ ದಿಲೀಪ ಹೊಸಮನಿ, ಮಹಿಳಾ ಸದಸ್ಯರಾದ ಸರಸ್ವತಿ ಕಾಂಬಳೆ, ಅಂಬಿಕಾ ವ್ಯಾಪಾರಿ, ವರ್ಷಾ ತಳವಾರ, ಚನ್ನವ್ವಾ, ಮಾನೆ, ಸವಿತಾ ಕಾಂಬಳೆ, ಶೋಭಾ ಸನದಿ, ಸೋನವ್ವಾ ಕಾಂಬಳೆ, ಸವಿತಾ ಖಾತೇದಾರ, ಪ್ರೇಮಾ ಕಾಂಬಳೆ, ಯಲ್ಲವ್ವಾ ದಿವಾಕರ, ಸುಶೀಲಾ ಸನದಿ, ಶೋಭಾ ಮಾದರ, ಹೊಳೆವ್ವಾ ಟೋಳಕೆ, ಗಂಗವ್ವಾ ನಿಜನ್ನವರ, ಸುಶವ್ವಾ ಮಾದರ ಮತ್ತಿತರರು ಉಪಸ್ಥಿತರಿದ್ದರು.


**ಕರ್ನಾಟಕ ಸರಕಾರ**
**(ಪೌರಾಡಳಿತ ಇಲಾಖೆ)**
**ಪಟ್ಟಣ ಪಂಚಾಯತ ಕಾರ್ಯಾಲಯ ಚನ್ನಮ್ಮನ ಕಿತ್ತೂರ–591115**
ತಾ:ಚ,ಕಿತ್ತೂರ ಜಿ:ಬೆಳಗಾವಿ ದೂ : 08288–286344
E-Mail :itstaff_ulb_chkittur@yahoo.in

ಕ್ರ:ಸಂ:ಪಪಂಚಕಿ:ಲೋಕೊ:15ನೆ ಹಣಕಾಸು, ಎಸ್.ಎಫ್.ಸಿ/2023–24 ದಿನಾಂಕ: 12/02/2024

**ಟೆಂಡರ್ ಪ್ರಕಟಣೆ: ॥ಇ–ಪ್ರೋಕ್ಯೂರಮೆಂಟ್ ಮುಖಾಂತರ॥**

ಸನ್ 2023–24ನೇ ಸಾಲಿನ 15 ನೇ ಹಣಕಾಸು, ಎಸ್.ಎಫ್.ಸಿ ಮುಕ್ತನಿಧಿ ಯೋಜನೆಯ ಅನುದಾನದಡಿಯಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಆದೇಶ 1999–2000ರ ಪ್ರಕಾರ ಆಕ್ಟ್ 2000ರ ನಿಯಮದಂತೆ ಸ್ಟ್ಯಾಂಡರ್ಡ ಬಿಡ್ ಡಾಕ್ಯುಮೆಂಟ್ ಕೆ.ಡಬ್ಲು–1 & ಕೆ.ಡಬ್ಲು–2 ನಿಯಮದನ್ವಯ ಟೆಂಡರಗಳನ್ನು ಆಹ್ವಾನಿಸಲಾಗಿದೆ. ಕಾರಣ ಇಚ್ಛೆಯುಳ್ಳ ಗುತ್ತಿಗೆದಾರರು ಇ–ಪ್ರೋಕ್ಯೂರಮೆಂಟ್ ಮುಖಾಂತರ ಮಾತ್ರ ಟೆಂಡರ ಸಲ್ಲಿಸಬಹುದು.

ಪ್ಯಾ. ಕ್ರ.ಸಂ:1:ಕಾಮಗಾರಿಗಳ ವಿವರ/ಇಂಡೆಂಟ್ ಸಂಖ್ಯೆ:DMA/2023-24/ WS/WORK_INDENT9157/CALL-2, ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ):23.70,ಇ.ಎಂ.ಡಿ ಮೊತ್ತ (ರೂ.ಗಳಲ್ಲಿ):59,250/–, ಪ್ಯಾ. ಕ್ರ.ಸಂ:2:ಕಾಮಗಾರಿಗಳ ವಿವರ/ಇಂಡೆಂಟ್ ಸಂಖ್ಯೆ:DMA/2023-24/ OW/WORK_INDENT9154/CALL-2 (SC), ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ):21.00, ಇ.ಎಂ.ಡಿ ಮೊತ್ತ (ರೂ. ಗಳಲ್ಲಿ):21,000/–, ಪ್ಯಾ. ಕ್ರ.ಸಂ:3:ಕಾಮಗಾರಿಗಳ ವಿವರ/ಇಂಡೆಂಟ್ ಸಂಖ್ಯೆ:DMA/2023-24/ OW/WORK_INDENT9158/CALL-2, ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ):2.32,ಇ.ಎಂ.ಡಿ ಮೊತ್ತ (ರೂ.ಗಳಲ್ಲಿ):5,800/–, ಪ್ಯಾ. ಕ್ರ.ಸಂ:4:ಕಾಮಗಾರಿಗಳ ವಿವರ/ಇಂಡೆಂಟ್ ಸಂಖ್ಯೆ:DMA/2023-24/ RD/WORK_INDENT9159,ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ): 11.50, ಇ.ಎಂ.ಡಿ ಮೊತ್ತ (ರೂ. ಗಳಲ್ಲಿ):28,750/–, ಪ್ಯಾ.ಕ್ರ.ಸಂ:5: ಕಾಮಗಾರಿಗಳ ವಿವರ/ಇಂಡೆಂಟ್ ಸಂಖ್ಯೆ:DMA/2023-24/WS/ WORK_INDENT15124, ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ):15.50 ,ಇ.ಎಂ.ಡಿ ಮೊತ್ತ (ರೂ. ಗಳಲ್ಲಿ):38,750/–, ಪ್ಯಾ. ಕ್ರ.ಸಂ:6: ಕಾಮಗಾರಿಗಳ ವಿವರ/ಇಂಡೆಂಟ್ ಸಂಖ್ಯೆ:DMA/2023-24/IND1479,ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ):2.50,ಇ.ಎಂ.ಡಿ ಮೊತ್ತ (ರೂ. ಗಳಲ್ಲಿ):6,250/–

ಟೆಂಡರ್ ಸಲ್ಲಿಸುವ ಮೊದಲು ಗುತ್ತಿಗೆದಾರರು ಅತ್ಯಂತ ಅವಶ್ಯಕವಾಗಿ ಟೆಂಡರುಗಳಿಗೆ ಸಂಬಂಧಿಸಿದಂತೆ ನಿಯಮ ನಿಭಂದಣೆಗಳನ್ನು ಓದಿ ಪಾಲಿಸಬೇಕು.

ಟೆಂಡರ ಫಾರ್ಮ ವೆಬ್ ಸೈಟನಿಂದ ಡೌನ್ ಲೋಡ ಮಾಡಿಕೊಳ್ಳುವ ಪ್ರಾರಂಭದ ದಿನಾಂಕ: 13–02–2024. ಭರ್ತಿ ಮಾಡಿದ ಟೆಂಡರಗಳನ್ನು ಅಪಲೋಡ್ (Upload) ಮಾಡುವ ಕೊನೆಯ ದಿನಾಂಕ: 20–02–2024 ಸಾಯಂಕಾಲ:4:00 ಘಂಟೆಯವರೆಗೆ. ಟೆಂಡರಗಳನ್ನು ತೆರೆಯುವ ದಿನಾಂಕ:21–02–2024 ರ ಸಂಜೆ 4:00 ಘಂಟೆಯ ನಂತರ ತೆರೆಯಲಾಗುವುದು. ಹೆಚ್ಚಿನ ಮಾಹಿತಿ ಮತ್ತು ಶರತ್ತುಗಳಿಗಾಗಿ Website: https://kppp.karnataka.gov.in ವೆಬ್‌ಸೈಟನಲ್ಲಿ ನೋಡಬಹುದು.

**ಸಹಿ/–ಮುಖ್ಯಾಧಿಕಾರಿಗಳು,**
**ಪಟ್ಟಣ ಪಂಚಾಯತ ಚ.ಕಿತ್ತೂರ**
DIPR/BGM/RO-NO-1117/KSMCA/2023-24

**ಸಹಿ/–ಆಡಳಿತಾಧಿಕಾರಿಗಳು,**
**ಪಟ್ಟಣ ಪಂಚಾಯತ ಚ.ಕಿತ್ತೂರ**
**ಹಾಗೂ ತಹಶಿಲ್ದಾರರು, ಚ.ಕಿತ್ತೂರ**


BELAGAVI VARADI KANNADA DAILY MORNING : Editor, Printer, Publisher & Owned By : Satish Basavani Gudagenatti. Basavani House No.53, Ashray Colony Sarathi Nagar, Tv Center - 590019, TQ & DIST Belagavi, Karnataka.
Printed At : LAXMI PRINTERS, No.627. Auto Nagar - 590016.TQ & DIST Belagavi, Karnataka Mob : 9900332089